**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು,**
**ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ಸಂಖ್ಯೆಃ 54/2025**

| | | |
|---|---|---|
| ಆರೋಪಿಯ ಹೆಸರು | : | ಮಂಜುನಾಥ ಅಲಿಯಾಸ್ ಮಂಜ |
| ತಂದೆಯ ಹೆಸರು | : | ಲಕ್ಷ್ಮಣಗೌಡ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಶಂಕರಪುರ, ಚಿಕ್ಕಮಗಳೂರು |

**ಕಲಂ 351 ಬಿ.ಎನ್.ಎಸ್.ಎಸ್ ಅಡಿಯಲ್ಲಿ ಆರೋಪಿತನ ಹೇಳಿಕೆ.**

ಪ್ರಶ್ನೆ-1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ-2 ಪ್ರಾ.ಸಾ-1 ಸಿದ್ಧಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ.3 ಸಂತೋಷರವರಿಗೆ ಸೇರಿದ ಚಿಕ್ಕಮಗಳೂರಿನ ಶಂಕರಪುರದಲ್ಲಿರುವ ಮನೆಯನ್ನು ಅವರು ಭೋಗ್ಯಕ್ಕೆ ಹಾಕಿಸಿಕೊಂಡು ವಾಸವಾಗಿದ್ದಾಗಿ, ಸದರಿ ಮನೆಯಲ್ಲಿ ಅವರ ಮಗಳಾದ ಶಾರದ ಮತ್ತು ಆಕೆಯ ಗಂಡನಾದ ಆರೋಪಿ ನಿನ್ನೊಂದಿಗೆ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-3 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 2 ವರ್ಷಗಳ ಹಿಂದೆ ಕರ್ತಿಕೆರೆ ವಾಸಿಯಾದ ಲಕ್ಷ್ಮಮ್ಮನ ಮಗನಾದ ಆರೋಪಿಯಾದ ನೀನು ಅವರ ಮಗಳು ಶಾರದಳನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-4 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಗಾರೆ ಕೆಲಸ ಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-5 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಮನೆಗೆ ಬೇಕಾದ ವಸ್ತುಗಳನ್ನು ತಂದು ಹಾಕುತ್ತಿರಲಿಲ್ಲ, ಮನೆಯ ಖರ್ಚಿಗೆ ಯಾವುದೇ ಹಣವನ್ನು ಕೊಡುತ್ತಿರಲಿಲ್ಲ ಮತ್ತು ನೀನು ಅವರ ಮಗಳ ಯೋಗಕ್ಷೇಮವನ್ನು ನೋಡದೇ ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-6 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಕೆಲಸಕ್ಕೆ ಹೋಗಿ ಸಂಪಾದಿಸಿದ ಹಣವನ್ನೆಲ್ಲಾ ನಿನ್ನ ಕುಡಿತಕ್ಕೆ ಖರ್ಚು ಮಾಡುತ್ತಿದ್ದುದ್ದಾಗಿ, ನೀನು ದುಡಿದ ಹಣ ನಿನ್ನ ಖರ್ಚಿಗೆ ಸಾಕಾಗುತ್ತಿರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-7 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಕುಡಿದು ಬಂದಾಗ ಅವರು ನಿನಗೆ ಊಟ ಹಾಕಿಕೊಡುವುದು ತಡ ಮಾಡಿದರೆ ನೀನು ಅವರ ಮಗಳಿಗೆ ಹೊಡೆಯುತ್ತಿದ್ದುದ್ದಾಗಿ, ನೀನು ಕುಡಿದು ಬಂದು ಸಣ್ಣಪುಟ್ಟ ವಿಚಾರದಲ್ಲಿ ಅವರಿಗೆ ಮತ್ತು ಅವರ ಮಗಳೊಂದಿಗೆ ಗಲಾಟೆ ಮಾಡಿ ಹಲವಾರು ಬಾರಿ ನಮಗೆ ಹೊಡೆದಿದ್ದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-8 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಪ್ರತಿದಿನ ಗಲಾಟೆ ಮಾಡುತ್ತಿದ್ದರಿಂದ ಮನೆ ಬಿಟ್ಟು ಹೋಗುವಂತೆ ಅವರು ಹೇಳಿದ್ದಾಗಿ, ಆದರೆ ನೀನು ಅವರ ಮಗಳನ್ನು ಕರೆದುಕೊಂಡು ಹೋಗಿ, ಸಾಕುವುದಿಲ್ಲವೆಂದು ಹೇಳಿದ್ದಾಗಿ, ಆಗ ಅವರ ಮಗಳು 9 ತಿಂಗಳ ಗರ್ಭಿಣಿಯಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-9 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 6 ತಿಂಗಳುಗಳ ಹಿಂದೆ ಒಂದು ದಿನ ಆರೋಪಿಯಾದ ನೀನು ಕೆಲಸಕ್ಕೆ ಹೋದವನು

ವಿಪರೀತವಾಗಿ ಕುಡಿದು ರಾತ್ರಿ ಮನೆಗೆ ಬಂದಿದ್ದಾಗಿ, ಗರ್ಭಿಣಿಯಾಗಿದ್ದ ಅವರ ಮಗಳು ಅವರ ಜೊತೆ ಮಲಗಿದ್ದಾಗಿ, ನೀನು ಅವರ ಮಗಳನ್ನು ಕುರಿತು 'ನನಗೆ ಊಟ ಹಾಕಿಕೊಡು ಮತ್ತು ನನ್ನೊಂದಿಗೆ ಬಂದು ಮಲಗು' ಎಂದು ಕರೆದು ಅವರ ಮಗಳನ್ನು ನೆಲಕ್ಕೆ ಬೀಳಿಸಿ ಆಕೆಯ ಕೂದಲನ್ನು ಹಿಡಿದು ಎಳೆದಾಡಿ ಮುಷ್ಟಿ ಮಾಡಿ ಆಕೆಯ ತಲೆಗೆ ಹಲವಾರು ಬಾರಿ ಬಲವಾಗಿ ಹೊಡೆದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-10 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಅವರ ಮಗಳನ್ನು ಕುರಿತು 'ನಿನ್ನನ್ನು ಮತ್ತು ನಿನ್ನ ಮಗುವನ್ನು ಕೊಲೆ ಮಾಡದೇ ಬಿಡುವುದಿಲ್ಲ' ಎಂದು ಹೇಳಿ ಕಾಲಿನಿಂದ ಹಲವಾರು ಬಾರಿ ಅವರ ಮಗಳ ಮೈಕೈಗೆ ಮತ್ತು ಹೊಟ್ಟೆಗೆ ಒದ್ದಾಗ ಅವರ ಮಗಳು ಜ್ಞಾನ ತಪ್ಪಿ ಬಿದ್ದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-11 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಆಕೆಯನ್ನು ಬಿಡಿಸಲು ಹೋದಾಗ ಆರೋಪಿಯಾದ ನೀನು ಅವರ ಮೈಕೈಗೆ ಕಾಲಿನಿಂದ ಒದ್ದು ನೋವು ಮಾಡಿದ್ದಾಗಿ, ಅವರ ಮಗಳಿಗೆ ಪೆಟ್ಟಾಗಿ ಸುಸ್ತಾಗಿದ್ದರಿಂದ ಆಕೆಗೆ ಮಾತೇ ಬರುತ್ತಿರಲಿಲ್ಲ ಮತ್ತು ಪ್ರಜ್ಞೆ ಇರಲಿಲ್ಲವೆಂದು, ಅವರಿಗೂ ನೋವಾಗಿದ್ದರಿಂದ ರಾತ್ರಿ ಹಾಗೆಯೇ ಮಲಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-12 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಬೆಳಿಗ್ಗೆ ಸುಸ್ತಾಗಿದ್ದ ಅವರ ಮಗಳನ್ನು ಅವರು ಮತ್ತು ಆರೋಪಿಯಾದ ನೀನು ಒಂದು ಆಟೋದಲ್ಲಿ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದ್ದಾಗಿ, ವೈದ್ಯರು ಅವರ ಮಗಳಿಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆ ಅಲ್ಲಿ ಸಾಧ್ಯವಿಲ್ಲವೆಂದು ಹೇಳಿ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ದಿನಾಂಕಃ15.01.2025 ರಂದು ಹೆರಿಗೆಗೆಂದು ನಾನು ಮತ್ತು ನನ್ನ ಅತ್ತೆ ಅಂದರೆ ಪ್ರಾಸಾ.2 ರವರು ಸೇರಿ ನನ್ನ ಹೆಂಡತಿಯನುನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನಂತರ ಅಲ್ಲಿಂದ ಆಂಬ್ಯುಲೆನ್ಸ್ ನಲ್ಲಿ ಆಕೆಯನ್ನು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

ಪ್ರಶ್ನೆ-13 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅಂಬ್ಯುಲೆನ್ಸಿನಲ್ಲಿ ಹಾಸನದ ಆಸ್ಪತ್ರೆಗೆ ಅವರ ಮಗಳ ಜೊತೆ ಅವರು ಮತ್ತು ವೈದ್ಯಕೀಯ ಸಿಬ್ಬಂದಿ ಮಾತ್ರ ಹಾಸನದ ಆಸ್ಪತ್ರೆಗೆ ಹೋಗಿದ್ದಾಗಿ, ಆರೋಪಿಯಾದ ನೀನು ಅವರ ಜೊತೆ ಬರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು, ಆಂಬ್ಯುಲೆನ್ಸ್ ನಲ್ಲಿ ನಾನೂ ಸಹ ಅಲ್ಲಿಗೆ ಹೋಗಿದ್ದೆನು.

ಪ್ರಶ್ನೆ-14 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ರಾತ್ರಿ ಹಾಸನದ ಆಸ್ಪತ್ರೆಯಲ್ಲಿ ವೈದ್ಯರು ಅವರ ಮಗಳಿಗೆ ಅಪರೇಷನ್ ಮಾಡಿ ಗಂಡು ಮಗುವನ್ನು ಹೊರ ತೆಗೆದು ಅದನ್ನು ಐ.ಸಿ.ಯು. ನಲ್ಲಿ ಇರಿಸಿದ್ದಾಗಿ, ಸದರಿ ಮಗು ಜೀವಂತವಾಗಿದ್ದಾಗಿ, ಆದರೆ ಅವರ ಮಗಳಿಗೆ ಪ್ರಜ್ಞೆ ಬರದೇ ಇದ್ದುದ್ದಾಗಿ ಮತ್ತು ಆರೋಪಿಯಾದ ನೀನು ಅವರ ಮಗಳು ಮತ್ತು ಅವರ ಮಗುವನ್ನು ನೋಡಲು ಬರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ನಾನು ಅಲ್ಲೇ ಇದ್ದೆ. ಆದರೆ ಮಗುವನ್ನು ನನಗೆ ತೋರಿಸಲಿಲ್ಲ.

ಪ್ರಶ್ನೆ-15 ಪ್ರಾ.ಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಅವರಿಗೆ ಮತ್ತು ಅವರ ಮಗಳ ಮೇಲೆ ಹಲ್ಲೆ ಮಾಡಿದ್ದ ವಿಚಾರವನ್ನು ವೈದ್ಯರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-16 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಿಕ್ಕಮಗಳೂರು ಮಹಿಳಾ ಪೋಲೀಸರು ಹಾಸನ ಆಸ್ಪತ್ರೆಗೆ ಬಂದು ಅವರನ್ನು ವಿಚಾರಿಸಿದಾಗ ಅವರು ನಡೆದ ಎಲ್ಲಾ ವಿಚಾರಗಳನ್ನು ತಿಳಿಸಿ ಆರೋಪಿಯಾದ ನಿನ್ನ ವಿರುದ್ಧ ಕ್ರಮ ಜರುಗಿಸಿ ಎಂದು ನಿಪಿ.1 ರಂತೆ ದೂರನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-17 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಪೊಲೀಸರಿಗೆ ದೂರು ಕೊಟ್ಟ 3 ದಿನಗಳ ಬಳಿಕ ಅವರ ಮಗಳು ಹಾಸನದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಸಮಯದಲ್ಲಿ ಅಂದರೆ ದಿಃ21.01.2025 ರಂದು ಬೆಳಗ್ಗೆ 8 ಗಂಟೆಗೆ ಚಿಕಿತ್ಸೆಗೆ ಸ್ಪಂಧಿಸದೇ ಮೃತಪಟ್ಟಿದ್ದಾಗಿ, ನಂತರ ಅದೇ ದಿನ ಅವರು ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಗೆ ಹೋಗಿ ಅವರ ಮಗಳು ಮೃತಪಟ್ಟಿದ್ದಾಗಿ ತಿಳಿಸಿ, ಆರೋಪಿಯಾದ ನೀನೆ ಆಕೆಯ ಸಾವಿಗೆ ಕಾರಣನಾಗಿದ್ದು ನಿನ್ನ ವಿರುದ್ಧ ಜರುಗಿಸುವಂತೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಶಾರದ ಮೃತಪಟ್ಟಿರುವುದು ಸರಿ. ಉಳಿದ ವಿಚಾರಗಳು ಸುಳ್ಳು.

ಪ್ರಶ್ನೆ-18 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೋಲೀಸರು ಅವರ ಮಗಳ ಮರಣೋತ್ತರ ಪರೀಕ್ಷೆಯನ್ನು ವೈದ್ಯರಿಂದ ನಡೆಸಿ, ಶವವನ್ನು ಅವರಿಗೆ ಕೊಟ್ಟ ಮೇರೆಗೆ ಅವರು ಆಕೆಯ ಅಂತ್ಯಕ್ರಿಯೆಯನ್ನು ಚಿಕ್ಕಮಗಳೂರಿನಲ್ಲಿ ನಡೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ ವಿಚಾರ ನನಗೆ ಗೊತ್ತಿಲ್ಲ.

ಪ್ರಶ್ನೆ-19 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದಾದ 2 ದಿನಗಳ ಬಳಿಕ ಪೋಲೀಸರು ಅವರು, ಅವರ ಮಗಳು ಮತ್ತು ಆರೋಪಿಯಾದ ನೀನು ಚಿಕ್ಕಮಗಳೂರಿನ ಶಂಕರಪುರದಲ್ಲಿ ಭೋಗ್ಯಕ್ಕೆ ವಾಸವಾಗಿದ್ದ ಮನೆಗೆ ಮಹಜರನ್ನು ಜರುಗಿಸಲು ಬಂದಾಗ ಆರೋಪಿಯಾದ ನೀನು ಅವರ ಮಗಳ ಮೇಲೆ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದ ಮೇರೆಗೆ ದಿಃ 23.01.2025 ರಂದು ಸಂಜೆ 5 ಗಂಟೆಯಿಂದ 5.45 ಗಂಟೆಯವರೆಗೆ ಸದರಿ ಸ್ಥಳದಲ್ಲಿ ಚಾಸಾ.17 ಪಾರ್ಥಿಬನ್ ಮತ್ತು ಚಾಸಾ.18 ಸುರೇಶ್ ಸಮಕ್ಷಮ ಪೊಲೀಸರು ನಿಪಿ.2 ರಂತೆ ಮಹಜರು ಕ್ರಮ ಜರುಗಿಸಿ, ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಹಾಗೂ ನಿಪಿ.5 ರಿಂದ ನಿಪಿ.8 ಫೋಟೋಗಳಲ್ಲಿ ಅವರ ಮಗಳ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಗೊತ್ತಿಲ್ಲ

ಪ್ರಶ್ನೆ-20 ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಮಗಳು ಮೃತಪಟ್ಟ ಬಳಿಕ ಪೊಲೀಸರು ಅವರನ್ನು ಚಿಕ್ಕಮಗಳೂರು ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಅವರು ಅವರಿಗೆ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-21 ಪ್ರಾಸಾ-2 ಲಕ್ಷ್ಮಿ ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರಿನ ಶಂಕರಪುರದ 2 ನೇ ಅಡ್ಡರಸ್ತೆಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗದಲ್ಲಿರುವ ಚಾಸಾ.3 ರವರಿಗೆ ಸೇರಿದ ಮನೆಯಲ್ಲಿ ಪ್ರಾಸಾ.1 ರವರು ಮೃತ ಶಾರದ ಮತ್ತು ಆರೋಪಿಯಾದ ನಿನ್ನೊಂದಿಗೆ ವಾಸವಾಗಿದ್ದಾಗಿ, ಅವರು ಸದರಿ ದೇವಸ್ಥಾನಕ್ಕೆ ಹೋದಾಗಲೆಲ್ಲಾ ನೀನು ಮದ್ಯವನ್ನು ಸೇವಿಸಿ ಬಂದು ನಿನ್ನ ಹೆಂಡತಿ ಶಾರದ ಮತ್ತು ಪ್ರಾಸಾ.1 ರವರೊಂದಿಗೆ ಜಗಳ ಮಾಡುತ್ತಿದ್ದನ್ನು ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ನಾನು. ಪ್ರಾಸಾ.1 ಮತ್ತು ಶಾರದರವರೊಂದಿಗೆ ಅಲ್ಲಿ ವಾಸವಾಗಿದ್ದು ನಿಜ. ಉಳಿದ ವಿಚಾರಗಳು ಸುಳ್ಳು.

ಪ್ರಶ್ನೆ-22 ಪ್ರಾಸಾ-2 ಲಕ್ಷ್ಮಿ ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 6

ತಿಂಗಳ ಹಿಂದೆ ಒಂದು ದಿನ ಅವರು ಸದರಿ ದೇವಸ್ಥಾನದ ಹತ್ತಿರ ಹೋಗಿದ್ದಾಗ ಆರೋಪಿಯಾದ ನೀನು ಮದ್ಯವನ್ನು ಸೇವಿಸಿ ಬಂದು ನಿನ್ನ ಹೆಂಡತಿ ಶಾರದ ಮತ್ತು ಪ್ರಾಸಾ.1 ರವರೊಂದಿಗೆ ಜಗಳ ಮಾಡಿ ನೀನು ಶಾರದಳಿಗೆ ಹೊಡೆದಿದ್ದು ಮತ್ತು ಆಕೆಯ ಹೊಟ್ಟೆಗೆ ಕಾಲಿನಿಂದ ಜೋರಾಗಿ ಒದಿದ್ದನ್ನು ಅವರು ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-23 ಪ್ರಾಸಾ-2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದಳು ಗರ್ಭಿಣಿಯಾಗಿದ್ದ ಕಾರಣ ಆಕೆಗೆ ತೀವ್ರ ನೋವು ಕಾಣಿಸಿಕೊಂಡಿದ್ದರಿಂದ ಆಕೆಯನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿನ ವೈದ್ಯರು ಆಕೆಗೆ ಅಲ್ಲಿ ಚಿಕಿತ್ಸೆ ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಆಕೆಯನ್ನು ಅಲ್ಲಿಂದ ಹಾಸನದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರ ಅವರಿಗೆ ತಿಳಿದಿದ್ದಾಗಿ, ಅಲ್ಲಿ ಶಾರದ ಒಂದು ಮಗುವಿಗೆ ಜನ್ಮ ಕೊಟ್ಟಿದ್ದಾಗಿ, ನಂತರ ಆಕೆ ಮೃತಪಟ್ಟಿದ್ದಾಗಿ ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-24 ಪ್ರಾಸಾ-2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಚಿಕ್ಕಮಗಳೂರು ಪೊಲೀಸರು ಅವರನ್ನು ಆ ಬಗ್ಗೆ ವಿಚಾರಿಸಿದಾಗ ಅವರು ಅವರಿಗೆ ಗೊತ್ತಿದ್ದ ವಿಚಾರವನ್ನು ಅವರಿಗೆ ತಿಳಿಸಿ ಹೇಳಿಕೆ ನೀಡಿದ್ದಾಗಿ, ಶಾರದಳ ಹೊಟ್ಟೆಗೆ ಆರೋಪಿಯಾದ ನೀನು ಒದಿದ್ದರಿಂದಲೇ ಆಕೆ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-25 ಪ್ರಾಸಾ-3 ಸಂತೋಷ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರಿನ ಶಂಕರಪುರದ 2 ನೇ ಕ್ರಾಸ್‌ನಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಎದುರಿಗೆ ಅವರ ತಾಯಿಯಾದ ವೆಂಕಟಮ್ಮರವರಿಗೆ ಸೇರಿದ ಮನೆಯನ್ನು ಈಗ್ಗೆ 5 ವರ್ಷಗಳ ಹಿಂದೆ ಅವರ ತಾಯಿ ಪ್ರಾಸಾ.1 ರವರಿಗೆ ಭೋಗ್ಯಕ್ಕೆ ಹಾಕಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-26 ಪ್ರಾಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಮನೆಯಲ್ಲಿ ಪ್ರಾಸಾ.1 ಮತ್ತು ಅವರ ಮಗಳಾದ ಶಾರದ ವಾಸವಾಗಿದ್ದಾಗಿ, ನಂತರ ಶಾರದಳನ್ನು ಆರೋಪಿಯಾದ ನಿನಗೆ ಮದುವೆ ಮಾಡಿಕೊಟ್ಟ ಬಳಿಕ ನೀನೂ ಸಹ ಪ್ರಾಸಾ.1 ಮತ್ತು ಶಾರದಳೊಂದಿಗೆ ಸದರಿ ಮನೆಯಲ್ಲಿ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-27 ಪ್ರಾಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಆಗಾಗ್ಗೆ ಸದರಿ ಮನೆಗೆ ಹೋದಾಗ ಆರೋಪಿಯಾದ ನೀನು ಮದ್ಯವನ್ನು ಸೇವಿಸಿ ಬಂದು ನಿನ್ನ ಹೆಂಡತಿ ಶಾರದರವರೊಂದಿಗೆ ಜಗಳ ಮಾಡುತ್ತಿದ್ದುದ್ದನ್ನು ನೋಡಿದ್ದಾಗಿ, ಆ ಸಮಯದಲ್ಲಿ 'ನೀವು ಇದೇ ರೀತಿ ಜಗಳ ಮಾಡುತ್ತಿದ್ದರೆ ಮನೆಯನ್ನು ಖಾಲಿ ಮಾಡಿಕೊಂಡು ಹೋಗಿ' ಎಂದು ಪ್ರಾಸಾ.1 ರವರಿಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-28 ಪ್ರಾಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು 2025 ರ ಸಂಕ್ರಾಂತಿ ಹಬ್ಬದ ದಿನದಂದು ಆರೋಪಿಯಾದ ನೀನು ಮದ್ಯವನ್ನು ಸೇವಿಸಿಕೊಂಡು ಬಂದು ಗರ್ಭಿಣಿಯಾಗಿದ್ದ ಶಾರದಳೊಂದಿಗೆ ತುಂಬಾ ಗಲಾಟೆ ಮಾಡಿ ಆಕೆಯ ಹೊಟ್ಟೆಗೆ ಒದ್ದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-29 ಪ್ರಾಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಶಾರದಳನ್ನು ಪ್ರಾಸಾ.1 ಮತ್ತು ನೀನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಸೇರಿಸಿದ್ದಾಗಿ, ಅಲ್ಲಿ ವೈದ್ಯರು ಚಿಕಿತ್ಸೆ ಸಾಧ್ಯವಿಲ್ಲ ಹೆಚ್ಚಿನ ಚಿಕಿತ್ಸೆಗಾಗಿ ಹಾಸನಕ್ಕೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ಶಾರದಳನ್ನು ಹಾಸನದ ಜಿಲ್ಲಾ ಆಸ್ಪತ್ರೆಗೆ ಅಂಬ್ಯುಲೇನ್ಸಿನಲ್ಲಿ ಕರೆದುಕೊಂಡು ಹೋಗಿ ದಾಖಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-30 ಪ್ರಾಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ರಾತ್ರಿ ಹಾಸನದ ಆಸ್ಪತ್ರೆಯಲ್ಲಿ ಶಾರದಳಿಗೆ ಅಪರೇಷನ್ ಮೂಲಕ ಗಂಡು ಮಗು ಜನಿಸಿದ್ದಾಗಿ, ಆದಾದ 6 ದಿನಗಳ ಬಳಿಕ ಚಿಕಿತ್ಸೆ ಫಲಕಾರಿಯಾಗದೇ ಹಾಸನದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ, ಆರೋಪಿಯಾದ ನೀನು ಕುಡಿದು ಬಂದು ಗಲಾಟೆ ಮಾಡಿ ಶಾರದಳ ಹೊಟ್ಟೆಗೆ ಒದ್ದಿದ್ದರಿಂದಲೇ ಆಕೆ ಮೃತಪಟ್ಟಿದ್ದಾಗಿ ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-31 ಪ್ರಾ.ಸಾ-3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದಳ ಶವವನ್ನು ಅವರ ಊರಿಗೆ ತೆಗೆದುಕೊಂಡು ಬಂದಾಗ ಸದರಿ ವಿಚಾರವನ್ನು ಪ್ರಾಸಾ.2 ರವರು ಅವರಿಗೆ ತಿಳಿಸಿದ್ದಾಗಿ, ಆದಾದ ಒಂದು ವಾರದ ಬಳಿಕ ಪೊಲೀಸರು ಅವರನ್ನು ವಿಚಾರಿಸಿದಾಗ ಅವರು ಅವರಿಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ, ನಿಪಿ.5 ರಿಂದ ಪಿ.8 ಫೋಟೋಗಳಲ್ಲಿ ಶಾರದಳ ಶವ

ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-32 ಪ್ರಾಸಾ-4 ವರುಣ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರಿನ ಶಂಕರಪುರದಲ್ಲಿರುವ ಪ್ರಾಸಾ.3 ರವರಿಗೆ ಸೇರಿದ ಮನೆಯನ್ನು ಪ್ರಾಸಾ.1 ಮತ್ತು ಮೃತ ಶಾರದ ಭೋಗ್ಯಕ್ಕೆ ಪಡೆದು ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-33 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 3 ರಿಂದ 4 ವರ್ಷಗಳ ಹಿಂದೆ ಶಾರದಳನ್ನು ಆರೋಪಿಯಾದ ನೀನು ಪ್ರೀತಿಸಿ ಮದುವೆ ಮಾಡಿಕೊಂಡ ಬಳಿಕ ನೀನು ಶಾರದಳೊಂದಿಗೆ ಪ್ರಾಸಾ.1 ರವರ ಮನೆಯಲ್ಲೇ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೌದು

ಪ್ರಶ್ನೆ-34 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಪ್ರತಿದಿನ ಮದ್ಯವನ್ನು ಸೇವಿಸಿ ಬಂದು ನಿನ್ನ ಹೆಂಡತಿಯಾದ ಶಾರದ ಮತ್ತು ಪ್ರಾಸಾ.1 ರವರೊಂದಿಗೆ ಗಲಾಟೆ ಮಾಡುತ್ತಿದ್ದಾಗ ಅವರು ಗಲಾಟೆ ಬಿಡಿಸಿ, ನಿನಗೆ ಬುದ್ಧಿ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-35 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 14-01-2025 ರಂದು ಸಂಕ್ರಾಂತಿ ಹಬ್ಬದ ಸಮಯದಲ್ಲಿ ಶಾರದ 8 ಅಥವಾ 9 ತಿಂಗಳ ಗರ್ಭಿಣಿಯಾಗಿದ್ದಾಗಿ, ಆ ದಿನ ಆರೋಪಿಯಾದ ನೀನು ಮದ್ಯವನ್ನು ಸೇವಿಸಿ ಮನೆಗೆ ಬಂದು ಶಾರದಳನ್ನು ಕುರಿತು ಊಟವನ್ನು ಬಡಿಸುವಂತೆ ಮತ್ತು ಆತನೊಂದಿಗೆ ಮಲಗಲು ಅಂದರೆ ದೈಹಿಕ ಸಂಪರ್ಕವನ್ನು ಹೊಂದುವಂತೆ ಕೇಳಿದ್ದಾಗಿ, ಆಗ ಶಾರದ ತನಗೆ ಆಗುವುದಿಲ್ಲವೆಂದು ಹೇಳಿದಾಗ ನೀನು ಆಕೆಯ ತಲೆ ಕೂದಲನ್ನು ಹಿಡಿದು ಎಳೆದಾಡಿ ನೆಲಕ್ಕೆ ಬಿಡಿಸಿ ತಲೆಯನ್ನು ಗೋಡೆಗೆ ಜಜ್ಜಿದ್ದಾಗಿ, ತನ್ನ ಕೈಯನ್ನು ಮುಷ್ಟಿ ಕಟ್ಟಿ ಆಕೆಯ ಮುಖಕ್ಕೆ ಹೊಡೆದಿದ್ದಾಗಿ ಮತ್ತು ತನ್ನ ಕಾಲುಗಳಿಂದ ಆಕೆಯ ಹೊಟ್ಟೆಗೆ ಒದ್ದಿದ್ದಾಗಿ, ಇದರಿಂದ ತುಂಬು ಗರ್ಭಿಣಿಯಾಗಿದ್ದ ಶಾರದಳಿಗೆ ಹೊಟ್ಟೆ ನೋವು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-36 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಅಂದರೆ ದಿಃ 15-01-2025 ರಂದು ಪ್ರಾಸಾ.1 ಮತ್ತು ಆರೋಪಿಯಾದ ನೀನು ಶಾರದಳನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು

ಹೋಗಿದ್ದಾಗಿ, ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಶಾರದಳನ್ನು ಹಾಸನದ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿದ್ದಾಗಿ, ಸದರಿ ಆಸ್ಪತ್ರೆಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಶಾರದಳಿಗೆ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿ ಆಕೆಯ ಗರ್ಭದಲ್ಲಿದ್ದ ಗಂಡು ಮಗುವನ್ನು ಹೊರಗೆ ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-37 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆದಾದ 4 ರಿಂದ 5 ದಿನಗಳ ಬಳಿಕ ಚಿಕಿತ್ಸೆ ಫಲಕಾರಿಯಾಗದೇ ಶಾರದ ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟ ವಿಚಾರ ಚಾಸಾ.6-ವಿಜಯಕುಮಾರ್ ರವರಿಂದ ತಿಳಿದಿದ್ದಾಗಿ, ಆರೋಪಿಯಾದ ನೀನು ಶಾರದಳ ಮೇಲೆ ಹಲ್ಲೆ ಮಾಡಿದ್ದ ವಿಚಾರ ಪ್ರಾಸಾ.1 ರವರಿಂದ ತಿಳಿದಿದ್ದಾಗಿ, ನೀನು ಶಾರದಳ ಮೇಲೆ ಹಲ್ಲೆ ಮಾಡಿ ಆಕೆಯ ಹೊಟ್ಟೆಗೆ ಒದ್ದಿದ್ದರಿಂದಲೇ ಆಕೆ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-38 ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪ್ರಾಸಾ.1 ರವರು ಆರೋಪಿಯಾದ ನಿನ್ನ ವಿರುದ್ಧ ಚಿಕ್ಕಮಗಳೂರು ಮಹಿಳಾ ಪೊಲೀಸರಿಗೆ ದೂರನ್ನು ಕೊಟ್ಟಿದ್ದಾಗಿ, ಸದರಿ ಪೊಲೀಸರು ಹಾಸನದ ಜಿಲ್ಲಾ ಆಸ್ಪತ್ರೆಗೆ ಬಂದ ಸಮಯದಲ್ಲಿ ಅವರು ಅಲ್ಲಿ ಹಾಜರಿದ್ದುದ್ದಾಗಿ, ಅಲ್ಲಿ ಪೊಲೀಸರು ಶಾರದಳ ಶವ ಪರೀಕ್ಷೆಯನ್ನು ನಡೆಸಿ, ಈ ಬಗ್ಗೆ ಅವರು ಅವರನ್ನು ವಿಚಾರಿಸಿದಾಗ ಅವರು ತಿಳಿದಿದ್ದ ವಿಚಾರವನ್ನು ಅವರಿಗೆ ತಿಳಿಸಿ ಹೇಳಿಕೆ ನೀಡಿದ್ದಾಗಿ, ನಿಪಿ.5 ರಿಂದ 8 ಫೋಟೋಗಳಲ್ಲಿ ಅವರ ತಂಗಿ ಶಾರದಳ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-39 ಪ್ರಾಸಾ-5 ವಿಜಯ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 8 ರಿಂದ 9 ತಿಂಗಳುಗಳ ಹಿಂದೆ ದಿಃ 21-01-2025 ರಂದು ಪ್ರಾಸಾ.4-ವರುಣ್ ಕುಮಾರರವರು ಅವರಿಗೆ ಫೋನ್ ಮಾಡಿ ತಮ್ಮ ಕಡೆಯವರೊಬ್ಬರು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ, ಅವರ ಶವವನ್ನು ಅಲ್ಲಿಂದ ತೆಗೆದುಕೊಂಡು ಬರಲು ಸಹಾಯ ಮಾಡಿ ಅವರು ಬಡವರಿದ್ದಾರೆ ಎಂದು ಅವರಿಗೆ ಕೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-40 ಪ್ರಾ.ಸಾ-5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪ್ರಾಸಾ.4 ರವರು ಅವರಿಗೆ ಫೋನ್ ಮಾಡಿದಾಗ ಅವರು ಹಾಸನದಲ್ಲಿದ್ದು, ಸದರಿ ಆಸ್ಪತ್ರೆಯ

ಶವಗಾರದಲ್ಲಿದ್ದ ಮಹಿಳೆಯ ಶವವನ್ನು ನೋಡಿ ಶವಗಾರದಿಂದ ಆಚೆ ಬಂದು, ಮಹಿಳೆಗೆ ಸಂಬಂಧಿಸಿದವರ ಬಗ್ಗೆ ಅಲ್ಲಿದ್ದ 4 ರಿಂದ 5 ಜನರನ್ನು ಕೇಳಿದ್ದಾಗಿ, ಸಿದ್ದಮ್ಮ ಎನ್ನುವವರು ತಾನು ಮೃತ ಮಹಿಳೆಯ ತಾಯಿ ಎಂದು ಹೇಳಿ ಮೃತ ಮಹಿಳೆಯ ಹೆಸರು ಶಾರದಮ್ಮ ಎಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-41 ಪ್ರಾಸಾ-5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಪ್ರಾಸಾ.1 ರವರನ್ನು ಕುರಿತು ಏನಾಯಿತು ಎಂದು ವಿಚಾರಿಸಿದಾಗ ಅವರು, ಶಾರದ ಅವರ ಮಗಳೆಂದು, ಗಾರೆ ಕೆಲಸ ಮಾಡುವ ಮಂಜು ಅಂದರೆ ಆರೋಪಿಯಾದ ನೀನು ಅವರ ಅಳಿಯನೆಂದು, ಇದೇ ವರ್ಷ ಸಂಕ್ರಾಂತಿ ಹಬ್ಬದಂದು ಅವರು ತುಂಬು ಗರ್ಭಿಣಿಯಾಗಿದ್ದ ಮಗಳೊಂದಿಗೆ ಮನೆಯಲ್ಲಿದ್ದಾಗ ಆರೋಪಿಯಾದ ನೀನು ಮದ್ಯವನ್ನು ಸೇವಿಸಿ ಬಂದು ಊಟವನ್ನು ಕೊಡುವಂತೆ ಕೇಳಿದಾಗ ಶಾರದ ಆಕೆಗೆ ಹುಷಾರಿಲ್ಲವೆಂದು ಹೇಳಿದಾಗ, ನೀನು ಶಾರದಳ ಕೂದಲನ್ನು ಹಿಡಿದು ಎಳೆದಾಡಿ ಗೋಡೆಗೆ ಬಡಿದಿದ್ದಾಗಿ, ಕಾಲಿನಿಂದ ಆಕೆಯ ಹೊಟ್ಟೆಗೆ ಒದ್ದು ನೋವುಂಟು ಮಾಡಿದಾಗ ಶಾರದ ಕುಸಿದು ಬಿದ್ದಿದ್ದಾಗಿ, ಮಾರನೆ ದಿನ ಆಕೆಯನ್ನು ಅವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ವೈದ್ಯರು ಆಕೆಯನ್ನು ಪರೀಕ್ಷಿಸಿ ಆಕೆಗೆ ಸಿವಿಯರ್ ಆಗಿದೆ ಎಂದು ಹೇಳಿ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದಾಗಿ, ಅವರು ಆಕೆಯನ್ನು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾಗಿ, ಅಲ್ಲಿ ವೈದ್ಯರು ಶಾರದಳಿಗೆ ಅಪರೇಷನ್ ಮಾಡಿ ಆಕೆಯ ಗರ್ಭದಿಂದ ಗಂಡು ಮಗುವನ್ನು ಹೊರ ತೆಗೆದಿದ್ದಾಗಿ, ಶಾರದಳನ್ನು ಐ.ಸಿ.ಯು ನಲ್ಲೀ ಇಟ್ಟಿದ್ದಾಗಿ, ಆದಾದ 3 ರಿಂದ 4 ದಿನಗಳ ಬಳಿಕ ಆಕೆ ಮೃತಪಟ್ಟ ಬಗ್ಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-42 ಪ್ರಾಸಾ-5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಚಿಕ್ಕಮಗಳೂರು ಪೊಲೀಸರು ಹಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಬಂದು ಅವರನ್ನು ವಿಚಾರಿಸಿದಾಗ ಆರೋಪಿಯಾದ ನೀನು ಕುಡಿದು ಬಂದು ತುಂಬು ಗರ್ಭಿಣಿಯಾಗಿದ್ದ ಶಾರದಳ ಹೊಟ್ಟೆಗೆ ಒದ್ದು, ಆಕೆಯ ಕೂದಲನ್ನು ಹಿಡಿದು ಎಳೆದಾಡಿ ಗೋಡೆಗೆ ತಲೆಯನ್ನು ಗುದ್ದಿಸಿದ್ದರಿಂದ ಆಕೆ ಮೃತಪಟ್ಟಳೆಂದು ಅವರಿಗೆ ಪ್ರಾಸಾ.1 ರವರಿಂದ ತಿಳಿದ ವಿಚಾರವನ್ನು ಅವರು ಪೊಲೀಸರಿಗೆ ಹೇಳಿಕೆ ನೀಡಿದ್ದಾಗಿ, ಆಗ ಹಾಸನದ ತಹಸೀಲ್ದಾರ್ ರವರು, ಪೋಲೀಸರು ಮತ್ತು ಸಿಡಿಪಿಓ ರವರು ಹಾಜರಿದ್ದುದಾಗಿ, ನಿಪಿ.5 ರಿಂದ 8 ಫೋಟೋಗಳಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ನೋಡಿದ ಶಾರದಳ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-43 ಪ್ರಾಸಾ.6-ಸುಧಾ, ಮಹಿಳಾ ಮೇಲ್ವಿಚಾರಕಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹಾಸನ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 21-01-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಶಾರದ ಕೋಂ ಮಂಜುನಾಥ ಎಂಬುವವರ ಶವ ಪರೀಕ್ಷೆಯನ್ನು ನಡೆಸಲು ಪಂಚರಾಗಿ ಸಹಕರಿಸುವಂತೆ ತಹಸೀಲ್ದಾರ್ ರವರಿಂದ ಹಾಸನದ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾದ ಚಾಸಾ.26-ಜ್ಯೋತಿರವರಿಗೆ ಮನವಿ ಬಂದ ಮೇರೆಗೆ, ಚಾಸಾ-26 ರವರು ಅವರನ್ನು ಮತ್ತು ಅವರ ಕಛೇರಿಯ ಮಹಿಳಾ ಮೇಲ್ವಿಚಾರಕಿಯಾದ ಚಾಸಾ.10-ನಿಂಗಮ್ಮರವರನ್ನು ಪಂಚರಾಗಿ ಸಹಕರಿಸುವಂತೆ ನೇಮಿಸಿ ಆದೇಶಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-44 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದರಂತೆ ಅವರು ಮತ್ತು ಚಾಸಾ.10 ರವರು ಆ ದಿನ ಅಂದರೆ ದಿಃ 21-01-2025 ರಂದು ಮಧ್ಯಾಹ್ನ 3 ಗಂಟೆಗೆ ಹಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಹೋದಾಗ ಅಲ್ಲಿ ಚಾಸಾ.11 ರವರು ಹಾಜರಿದ್ದುದ್ದಾಗಿ, ಅಲ್ಲಿಗೆ ಬಂದಿದ್ದ ಹಾಸನ ತಾಲ್ಲೂಕು ದಂಡಾಧಿಕಾರಿಗಳು ಅವರಿಗೆ, ಚಾಸಾ.10 ಮತ್ತು 11 ರವರಿಗೆ ಮೃತಳ ಶವ ತನಿಖೆಯನ್ನು ನಡೆಸಲು ಪಂಚರಾಗಿ ಸಹಕರಿಸುವಂತೆ ನಿಪಿ.9 ರಂತೆ ನೋಟೀಸನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-45 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಸದರಿ ಆಸ್ಪತ್ರೆಯ ಶವಗಾರದಲ್ಲಿ ಇರಿಸಿದ್ದ ಶಾರದ ಕೋಂ ಮಂಜುನಾಥರವರ ಶವವನ್ನು ನೋಡಿದಾಗ ಆಕೆಯ ಕೆಳ ತುಟಿಯ ಒಳಭಾಗದಲ್ಲಿ ಗಾಯವಾಗಿದ್ದಾಗಿ, ಆಕೆಯ ಹೊಟ್ಟೆಯ ಮೇಲೆ ಸಿಜರಿಯನ್ ಮಾಡಿರುವ ಗುರುತಾಗಿದ್ದಾಗಿ, ಆಕೆಯ ಬೆನ್ನು ಮತ್ತು ಹೊಟ್ಟೆಯ ಮೇಲೆ ಹೊಡೆದಿರುವ ಗುರುತುಗಳು ಕಂಡುಬಂದಿದ್ದಾಗಿ, ತುಂಬು ಗರ್ಭಿಣಿಯಾಗಿದ್ದ ಶಾರದಳ ಹೊಟ್ಟೆಗೆ ಆಕೆಯ ಗಂಡ ಒದ್ದಿದ್ದರಿಂದ ಆಕೆಯ ಸಾವು ಸಂಭವಿಸಿರಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾಗಿ, ಆ ಬಗ್ಗೆ ತಹಸೀಲ್ದಾರ್ ರವರು ಮಧ್ಯಾಹ್ನ 3 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಿಪಿ.10 ರಂತೆ ಶವ ಪಂಚನಾಮೆಯನ್ನು ಬರೆದು, ನಿಪಿ.5 ರಿಂದ ಪಿ.8 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-46 ಪ್ರಾಸಾ.7 ಡಾಃಸಂತೋಷ್ ಕುಮಾರ್, ಹಿರಿಯ ತಜ್ಞರು, ಜಿಲ್ಲಾ ಆಸ್ಪತ್ರೆ ಹಾಸನ ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರು ಮಹಿಳಾ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ.7/2025 ಕ್ಕೆ ಸಂಬಂಧಪಟ್ಟಂತೆ ಹಾಸನ ತಹಸೀಲ್ದಾರ್ ರವರು ಸಲ್ಲಿಸಿದ ಮನವಿ ಮೇರೆಗೆ ಅವರು ದಿಃ 21.01.2025 ರಂದು ಸಂಜೆ 7.10 ರಿಂದ 8.10 ರವರೆಗೆ ಶಾರದ ಕೋಂ ಮಂಜುನಾಥ ಇವರ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿದ್ದಾಗಿ, ಡಬ್ಲ್ಯೂ ಪಿ.ಸಿ-19 ಸುನಿತರವರು ಸದರಿ ಮೃತ ದೇಹವನ್ನು ಗುರುತಿಸಿದ್ದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-47 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು “On examination the dead body was of female with light brown complexion, it was poorly built and nourished. Rigormortis was present in the neck region and was setting in. Postmortem staining was present over the back and it was not fixed. Horizontally placed sutured wound measuring 12 c.m. in length was present over the lower part of abdomen in the midline’’ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-48 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತದೇಹದಲ್ಲಿ ಕೆಳಕಂಡ ಗಾಯಗಳು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆಃ-
1) Laceration measuring 1 c.m x .04 c.m x mucosa deep was present over the lower lip, 2) Abrasion measuring 1 c.m. x 1 c.m was present over the right knee, 3)Abrasion measuring 1 c.m. x 1 c.m was present over left great toe" ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-49 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, “I noticed following that all organs at the head and thorax region were intact and pale. In the abdomen

region, right anterior wall showed resolving contusion measuring 4 c.m x 3 c.m. Mesentery showed resolving diffuse contusion. Other organs at abdomen region were intact and pale. The genito-urinary organs were intact and pale. Uterus contained product of conception. The external injuries as well as the internal injuries noted by me were ante-mortem in nature. The external injuries were covered with black scab that indicates that the age of said injuries were 4 to 7 days prior to death. The time since death was 4 to 8 hours prior to the body being kept in cold storage" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-50 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 27.01.2025 ರಂದು ಸದರಿ ಆಸ್ಪತ್ರೆಯಿಂದ ಮೃತಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡಿದ್ದಾಗಿ, ಅವರು ನಡೆಸಿದ ಮರಣೋತ್ತರ ಪರೀಕ್ಷಾ ವರದಿ ಹಾಗೂ ಮೃತಳಿಗೆ ಸಂಬಂಧಪಟ್ಟ ದಾಖಲೆಗಳ ಪ್ರಕಾರ "death was due to complications consequent to blunt abdominal injury sustained with complications of pregnancy being significant contributory factor" ಎಂದು ಅವರು ಅಭಿಪ್ರಾಯ ಪಟ್ಟಿದ್ದಾಗಿ, ಈ ಬಗ್ಗೆ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ-11 ರಂತೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-51 ಪ್ರಾಸಾ.8 ಡಾಃ ಗೀತಾಂಜಲಿ ಜಿ., ವೈದ್ಯಕೀಯ ವಿಜ್ಞಾನ ಸಂಸ್ಥೆ ಚಿಕ್ಕಮಗಳೂರಿನ ಸಹಾಯಕ ಪ್ರೊಫೇಸರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ15.01.2025 ರಂದು ಬೆಳಗ್ಗೆ 9.20 ಗಂಟೆ ಸಮಯದಲ್ಲಿ ಶಂಕರಪುರ ವಾಸಿಯಾದ ಶಾರದ ಕೋಂ ಮಂಜುನಾಥ ಇವರನ್ನು ಅವರ ತಾಯಿ ಮತ್ತು ಆಕೆಯ ಗಂಡ ಅವರ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-52 ಪ್ರಾಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು "On

examination patient was unconscious and her pulse rate was 90 beats per minute, blood pressure was 130/80, saturation was 100%, GRPS was 81 miligram. Per abdominal examination, it showed uterus corresponding to 34 weeks of gestation and her uterus was relaxed. Per vaginal examination, I noticed that it was 2 c.m dilated and 60% effaced. As patient was unconscious and the history of convulsions was given" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-53 ಪ್ರಾಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆಕೆ ಪ್ರಜ್ಞಾಹೀನಳಾಗಿದ್ದರಿಂದ ಹಾಗೂ ಸೆಳೆತದ ಹಿನ್ನೆಲೆಯನ್ನು ನೀಡಿದ್ದರಿಂದ ಅವರು ಆಕೆಗೆ ಅದೇ ರೀತಿ ಅದೇ ದಿನ ಚಿಕಿತ್ಸೆ ನೀಡಿದ್ದಾಗಿ, ಹೆಚ್ಚಿನ ಚಿಕಿತ್ಸೆಗಾಗಿ ಸಲಹೆ ನೀಡಿ, ಆಕೆಯನ್ನು ಸ್ಥಳಾಂತರಿಸಲು ಹೋದ ಸಮಯದಲ್ಲಿ ಆಕೆಯ ತಾಯಿ ಆಕೆಯ ಗಂಡನಿಂದ ಹಲ್ಲೆಗೊಳಗಾದ ಬಗ್ಗೆ ವರದಿ ಮಾಡಿದ್ದು, ಸಂಬಂಧಪಟ್ಟ ಪೋಲೀಸರ ಕೋರಿಕೆ ಮೇರೆಗೆ ದಿಃ 15.01.2025 ರಂದು ಅವರ ಆಸ್ಪತ್ರೆಯ ಒಳರೋಗಿ ನೋಂದಣಿ ನಮೂನೆ ಹಾಗೂ ಕೇಸ್ ಶೀಟನ್ನು ನಿಪಿ.12 ರಂತೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-54 ಪ್ರಾಸಾ.9 ಡಾಃ ಶ್ರೀಧರ್, ಹಾಸನದ ಹಿಮ್ಸ್ ಆಸ್ಪತ್ರೆಯ ಅಸೋಸಿಯೇಟ್ ಪ್ರೊಫೇಸರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 15-01-2025 ರಂದು ಮಧ್ಯಾಹ್ನ 1.45 ಗಂಟೆಗೆ ಅವರ ಆಸ್ಪತ್ರೆಯ ವೈದ್ಯರಾದ ಚಾಸಾ.15-ಡಾ. ಸುಮರವರು ಕರ್ತವ್ಯದಲ್ಲಿದ್ದ ಸಮಯದಲ್ಲಿ ಶಾರದ ಕೋಂ ಮಂಜು ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾಸಾ.8 ಗೀತಾಂಜಲಿರವರ ಸೂಚನೆಯ ಮೇರೆಗೆ ಅವರ ಆಸ್ಪತ್ರೆಗೆ ಬಂದು ದಾಖಲಾಗಿದ್ದಾಗಿ, ಆ ಸಮಯದಲ್ಲಿ ಶಾರದರವರು ಪ್ರಜ್ಞಾಹೀನರಾಗಿದ್ದು, ಅವರ ತಾಯಿ 2 ದಿನಗಳ ಹಿಂದಿನಿಂದ ನಿರಂತರವಾಗಿ 7 ರಿಂದ 8 ಬಾರಿ ಆಕೆಗೆ ಪಿಟ್ಸ್ ಬಂದಿದ್ದಾಗಿ, ಆಕೆಗೆ ಈ ಹಿಂದೆ ಒಮ್ಮೆ ಸಿಜರಿಯನ್ ಆಗಿದ್ದಾಗಿ, ಆಕೆ 2ನೇ ಬಾರಿಗೆ ಗರ್ಭಿಣಿಯಾಗಿ 9 ತಿಂಗಳು ಆಗಿದ್ದಾಗಿ, ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿನ ವೈದ್ಯರ ಸೂಚನೆಯ ಮೇರೆಗೆ ಆಕೆಯನ್ನು ಅವರ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾಗಿ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-55 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಕೂಡಲೆ ಶಾರದವರನ್ನು ಪರೀಕ್ಷೆಗೊಳಪಡಿಸಿ ಆಕೆಯ ಪ್ರೆಗ್ನೇನ್ಸಿಗೆ ಮತ್ತು ಎಪಿಲಿಪ್ಸಿಗೆ ಚಿಕಿತ್ಸೆಯನ್ನು ಪ್ರಾರಂಭಿಸಿದ್ದಾಗಿ, ಅದೇ ದಿನ ರಾತ್ರಿ 8.48 ಗಂಟೆಗೆ ಅವರ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಚಾಸಾ.15-ಡಾ.ಸುಮಾ ರವರು ಶಾರದರವರಿಗೆ ಶಸ್ತ್ರಚಿಕಿತ್ಸೆ ಮಾಡಿ 2 ಕೆ.ಜಿ. ತೂಕದ ಗಂಡುಮಗುವನ್ನು ಹೊರತೆಗೆದಿದ್ದಾಗಿ, Eclampsia ಇದ್ದ ಪಕ್ಷದಲ್ಲಿ ಸಾಮಾನ್ಯವಾಗಿ ಹೆರಿಗೆಯಾದ ಬಳಿಕ ರೋಗಿಗೆ ಪ್ರಜ್ಞೆ ಬರುತ್ತಿದ್ದುದ್ದಾಗಿ, ಆದರೆ ಶಾರದರವರಿಗೆ ಹೆರಿಗೆಯ ನಂತರವು ಪ್ರಜ್ಞೆ ಬಾರದ ಕಾರಣ ಆಕೆಯ ಮೆದುಳಿಗೆ ಸಂಬಂಧಿಸಿದ ಬೇರೆ ಯಾವುದಾದರೂ ತೊಂದರೆ ಇರಬಹುದೆಂದು ಅನುಮಾನಿಸಿ ಅದೇ ದಿನ ಆಕೆಯ ಸಿಟಿ ಸ್ಕ್ಯಾನ್ ನ್ನು ಮಾಡಿಸಿದ್ದಾಗಿ, ಸದರಿ ಸ್ಕ್ಯಾನ್ ವರದಿಯಲ್ಲಿ ಆಕೆಯ ಮೊದಲನೇ ಗರ್ಭಾವಸ್ಥೆ ಸಮಯದಲ್ಲಿ ಆಕೆಯ ಮೆದುಳಿಗೆ Infarction ಆಗಿದ್ದು ಕಂಡುಬಂದಿದ್ದಾಗಿ, ಆಕೆಗೆ ಚಿಕಿತ್ಸೆ ನೀಡಿದ್ದಾಗಿಯೂ ಆಕೆಗೆ ಪ್ರಜ್ಞೆ ಬರದೆ ಆಕೆ ದಿಃ 21-01-2025 ರಂದು ಬೆಳಿಗ್ಗೆ 8.35 ಗಂಟೆಗೆ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-56 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದರವರು ಅವರ ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಸಮಯದಲ್ಲಿ ಅವರು ಅವರ ಆಸ್ಪತ್ರೆಯ ಸಿ-ಯುನಿಟ್ ನ ಮುಖ್ಯಸ್ಥನಾಗಿ ಕರ್ತವ್ಯ ನಿರ್ವಹಿಸುತ್ತಿದ್ದುದ್ದಾಗಿ, ಅವರ ಯುನಿಟ್ ನಲ್ಲಿ ಚಾಸಾ.15- ಡಾ.ಸುಮ ಮತ್ತು ಇನ್ನೂ ಇಬ್ಬರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದುದ್ದಾಗಿ, ಶಾರದವರಿಗೆ ನೀಡಲಾದ ಚಿಕಿತ್ಸೆ ಬಗ್ಗೆ ಅವರು ಉಸ್ತುವರಿ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-57 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದರವರು ಗರ್ಭಿಣಿ ಮತ್ತು ಪ್ರಜ್ಞಾಹೀನರಾಗಿದ್ದ ಕಾರಣ ಅವರನ್ನು ಅವರ ಆಸ್ಪತ್ರೆಗೆ ಕರೆದುಕೊಂಡು ಬಂದ ಕೂಡಲೇ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗಕ್ಕೆ ದಿಃ 15-01-2025 ರಂದು ಮೊದಲಿಗೆ ಆಂಬ್ಯುಲೇನ್ಸಿನವರು ಕರೆದುಕೊಂಡು ಬಂದಿದ್ದಾಗಿ, ಅವರು ಆಕೆಯನ್ನು ಪರೀಕ್ಷಿಸಿದ ಬಳಿಕ ಶಾರದವರನ್ನು ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರಾದ ಡಾಃ ವಿನಯರವರ ಬಳಿ ಕಳುಹಿಸಿ ಕೊಟ್ಟಿದ್ದಾಗಿ, ಅವರು ಆಕೆಯನ್ನು ಪರೀಕ್ಷಿಸಿ ಘಟನೆಯ ಹಿನ್ನಲೆಯನ್ನು ನಿಪಿ.14 ರಂತೆ ಎಂ.ಎಲ್.ಸಿ. ವಹಿಯನ್ನು ದಾಖಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-58 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೊದಲಿಗೆ ಚಾಸಾ.15 ರವರು ಶಾರದವರನ್ನು ಪರೀಕ್ಷಿಸಿದ ಬಗ್ಗೆ ನಿಪಿ.15 ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು, ಒಳರೋಗಿಯಾಗಿ ದಾಖಲಿಸಿದ ಬಗ್ಗೆ ಒಳರೋಗಿ ಚೀಟಿ ನಿಪಿ.16 ನ್ನು ಹಾಗೂ ಅವರಿಗೆ ನೀಡಲಾದ ಚಿಕಿತ್ಸೆ ಮತ್ತು ಪರೀಕ್ಷಾ ವರದಿಗಳನ್ನು ಒಳಗೊಂಡ ಕೇಸ್ ಶೀಟಿನ ದೃಢೀಕೃತ ಪ್ರತಿ ನಿಪಿ.17 ನ್ನು ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-59 ಪ್ರಾಸಾ.10 ಡಾ.ಸುಮ, ಹಾಸನದ ಹಿಮ್ಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 15-01-2025 ರಂದು ಅವರು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ಮಧ್ಯಾಹ್ನ ಸುಮಾರು 12 ಗಂಟೆಗೆ ಶಾರದ ಕೋಂ ಮಂಜು ರವರಿಗೆ ನಿರಂತರವಾಗಿ ಪಿಟ್ಸ್ ಬರುತ್ತಿತ್ತು ಎಂಬ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಅವರ ಆಸ್ಪತ್ರೆಗೆ ಆಕೆಯನ್ನು ಅವರ ತಾಯಿ ಮತ್ತು ಗಂಡ ಕರೆದುಕೊಂಡು ಬಂದಿದ್ದಾಗಿ, ಶಾರದವರನ್ನು ಪರೀಕ್ಷೆ ಮಾಡಿ ನೋಡಿದಾಗ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಯಾವುದಕ್ಕೂ ಸ್ಪಂದಿಸುತ್ತಿರಲಿಲ್ಲವೆಂದು, ಅವರು ಆಕೆಯನ್ನು ಹೊರರೋಗಿ ವಿಭಾಗದಲ್ಲಿ ಪರೀಕ್ಷಿಸಿ ಆಕೆಯ ಗಂಡ ನೀಡಿದ ವಿವರಗಳನ್ನು ದಾಖಲು ಮಾಡಿದ್ದಾಗಿ, ಆ ಬಗ್ಗೆ ನಿಪಿ-15 ರಂತೆ ಹೊರರೋಗಿ ಚೀಟಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು. ಆರೋಪಿ ಮುಂದುವರಿದು ಹೆರಿಗೆಗೆಂದು ನಾನು ಶಾರದಳವನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆನು ಎನ್ನುತ್ತಾರೆ.

ಪ್ರಶ್ನೆ-60 ಪ್ರಾಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಕೂಡಲೇ ಶಾರದವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ದಾಖಲಿಸಿಕೊಂಡು ಚಿಕಿತ್ಸೆ ಪ್ರಾರಂಭಿಸಿದ್ದಾಗಿ, ಗರ್ಭಿಣಿ ಮಹಿಳೆಗೆ ಪಿಟ್ಸ್ ಬಂದರೆ ಆಕೆಗೆ ಹೆರಿಗೆ ಮಾಡಿಸಿದರೆ ಸರಿಯಾಗುತ್ತದೆ ಮತ್ತು ಆಕೆಗೆ ಮೊದಲನೇ ಹೆರಿಗೆ ಬೆಂಗಳೂರಿನ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಸಿಜೇರಿಯನ್ ಮುಖಾಂತರ ಆಗಿದ್ದು, ಆಕೆ ಅವರ ಆಸ್ಪತ್ರೆಗೆ ಬಂದಾಗಲೂ ಸಹ ಹೆರಿಗೆ ನೋವು ಇದ್ದ ಕಾರಣ ಅವರು ಆಕೆಗೆ ಹೆರಿಗೆ ಮಾಡಿಸಲು ನಿರ್ಧರಿಸಿ, ಅದಕ್ಕೆ ಆಕೆಯ ತಾಯಿ ಮತ್ತು ಗಂಡನ ಒಪ್ಪಿಗೆಯನ್ನು ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸರಿ

ಪ್ರಶ್ನೆ-61 ಪ್ರಾಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅದೇ ದಿನ ರಾತ್ರಿ 8.48 ಗಂಟೆಗೆ ಅವರ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಹೇಮರವರು ಶಾರದರವರಿಗೆ ಜನರಲ್ ಅನಸ್ತೇಸಿಯ ನೀಡಿದ ಮೇರೆಗೆ ಅವರು ಆಕೆಗೆ ಶಸ್ತ್ರಚಿಕಿತ್ಸೆ ಮಾಡಿ 2 ಕೆ.ಜಿ. ತೂಕದ ಗಂಡುಮಗುವನ್ನು ಹೊರತೆಗೆದಿದ್ದಾಗಿ, ಆದರೆ ಶಾರದರವರಿಗೆ ಹೆರಿಗೆಯ ನಂತರವೂ ಪ್ರಜ್ಞೆ ಬಾರದಿದ್ದಾಗಿ, ಆಕೆಯನ್ನು ವೆಂಟಿಲೇಟರಿನಲ್ಲಿಯೇ ಇಟ್ಟು ಆಕೆಗೆ ಚಿಕಿತ್ಸೆ ನೀಡುತ್ತಿದ್ದುದ್ದಾಗಿ, ಆದರೆ ಆಕೆ ಚಿಕಿತ್ಸೆಗೆ ಸ್ಪಂದಿಸದೇ ದಿಃ 21-01-2025 ರಂದು ಬೆಳಿಗ್ಗೆ 8.35 ಗಂಟೆಗೆ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಹೆರಿಗೆಯಾದ ವಿಚಾರ ಗೊತ್ತು. ಉಳಿದ ವಿಚಾರ ಗೊತ್ತಿಲ್ಲ.

ಪ್ರಶ್ನೆ-62 ಪ್ರಾಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ಅವರ ಆಸ್ಪತ್ರೆಗೆ ಕಳುಹಿಸಿ ಕೊಟ್ಟ ಬಗ್ಗೆ ನಿಪಿ.13 ರೇಫರಲ್ ಕಾರ್ಡಿನ ದೃಢೀಕೃತ ಪ್ರತಿಯನ್ನು ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಗೊತ್ತಿಲ್ಲ

ಪ್ರಶ್ನೆ-63 ಪ್ರಾಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರಾದ ಡಾಃ ವಿನಯರವರು ಶಾರದವರನ್ನು ಪರೀಕ್ಷಿಸಿ ಘಟನೆಯ ಹಿನ್ನಲೆಯನ್ನು ನಿಪಿ.14 ರಂತೆ ಎಂ.ಎಲ್.ಸಿ. ವಹಿಯನ್ನು ದಾಖಲಿಸಿದ್ದಾಗಿ, ಮೊದಲಿಗೆ ಚಾಸಾ.15 ರವರು ಆಕೆಯನ್ನು ಪರೀಕ್ಷಿಸಿದ ಬಗ್ಗೆ ಹೊರರೋಗಿ ಚೀಟಿಯ ದೃಢೀಕೃತ ಪ್ರತಿ ನಿಪಿ.15 ನ್ನು ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದಾಗಿ, ಶಾರದವರನ್ನು ಒಳರೋಗಿಯಾಗಿ ದಾಖಲಿಸಿದ ಬಗ್ಗೆ ನಿಪಿ.16 ರಂತೆ ಅವರ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ದೃಢೀಕೃತ ಪ್ರತಿಯನ್ನು ನೀಡಿದ್ದಾಗಿ, ಶಾರದರವರಿಗೆ ನೀಡಲಾದ ಚಿಕಿತ್ಸೆ ಮತ್ತು ಪರೀಕ್ಷಾ ವರದಿಗಳನ್ನು ಒಳಗೊಂಡ ಕೇಸ್ ಶೀಟಿನ ದೃಢೀಕೃತ ಪ್ರತಿಗಳು ನಿಪಿ.17 ನ್ನು ಅವರ ಆಸ್ಪತ್ರೆಯ ಕ್ಯಾಸುಲಟಿ ವೈದ್ಯಾಧಿಕಾರಿಗಳು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-64 ಪ್ರಾಸಾ.11-ಪಾರ್ಥಿಬನ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ನಿನ್ನ ಹೆಂಡತಿ ಶಾರದಳಿಗೆ ಹೊಡೆದು ಸಾಯಿಸಿದ್ದ ಬಗ್ಗೆ ದಿಃ 23.01.2025 ರಂದು ಮಹಜರ್ ಜರುಗಿಸಲು ಸಹಕರಿಸಬೇಕೆಂದು ಅವರಿಗೆ ಮತ್ತು ಚಾಸಾ.18 ರವರಿಗೆ ಮಹಿಳಾ ಪೊಲೀಸರು ನಿಪಿ.18 ರಂತೆ ನೋಟೀಸನ್ನು ನೀಡಿದ ಮೇರೆಗೆ ಅದೇ ದಿನ ಅವರು ಮತ್ತು ಚಾಸಾ.18 ರವರು ಶಂಕರಪುರದ

2 ನೇ ಅಡ್ಡ ರಸ್ತೆಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ನೀನು ನಿನ್ನ ಹೆಂಡತಿ ಶಾರದ ಮತ್ತು ಪ್ರಾಸಾ.1 ರವರೊಂದಿಗೆ ವಾಸವಾಗಿದ್ದ ಮನೆಯ ಹತ್ತಿರ ಹೋದಾಗ ಪೊಲೀಸರು ಬಂದಿದ್ದಾಗಿ ಅವರ ಸಮಕ್ಷಮ ಪ್ರಾಸಾ.1 ರವರು ನೀನು ಶಾರದಳಿಗೆ ಹೊಡೆದ ಸ್ಥಳ ಅದೇ ಎಂದು ಪೊಲೀಸರಿಗೆ ತೋರಿಸಿದ ಮೇರೆಗೆ ನಿಪಿ.2 ರಂತೆ ಮಹಜರು ಜರುಗಿಸಿ, ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-65 ಪ್ರಾಸಾ.12 ರವಿಗೌಡ, ಚಿಕ್ಕಮಗಳೂರು ಮಹಿಳಾ ಪೋಲಿಸ್ ಠಾಣೆಯ ಪೇದೆ ತಮ್ಮ ಸಾಕ್ಷದಲ್ಲಿ ದಿಃ 16-01-2025 ರಂದು ಅವರನ್ನು ಮತ್ತು ಚಾಸಾ.8 ಮುಖ್ಯ ಪೇದೆ ನಾಗರಾಜುರವರನ್ನು ಪ್ರಕರಣದ ಆರೋಪಿಯಾದ ನಿನ್ನ ಪತ್ತೆಗಾಗಿ ನೇಮಿಸಿದ ಮೇರೆಗೆ ಅವರು ನಿನ್ನನ್ನು ಚಿಕ್ಕಮಗಳೂರು ನಗರದಲ್ಲಿ ಹುಡುಕಾಡಿದರೂ ನೀನು ಸಿಗದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-66 ಪ್ರಾಸಾ.12 ಇವರು ತಮ್ಮ ಸಾಕ್ಷದಲ್ಲಿ ಮುಂದುವರಿದು ಮಾರನೆ ದಿನ ಅಂದರೆ ದಿಃ 17-01-2025 ರಂದು ಬೆಳಿಗ್ಗೆ ಬಾತ್ಮೀದಾರರಿಂದ ನೀನು ಚಿಕ್ಕಮಗಳೂರಿನ ಆಜಾದ್ ಪಾರ್ಕಿನ ಬಳಿ ಇರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಅವರು ಮತ್ತು ಚಾಸಾ.8 ರವರು ಸದರಿ ಸ್ಥಳದ ಬಳಿ ಹೋಗಿದ್ದಾಗಿ, ನೀನು ಸಮವಸ್ತ್ರದಲ್ಲಿದ್ದ ಅವರನ್ನು ಕಂಡು ಓಡಲು ಪ್ರಾರಂಭಿಸಿದ್ದಾಗಿ, ಬೆಳಗ್ಗೆ 7.15 ಗಂಟೆಗೆ ಅವರು ನಿನ್ನನ್ನು ಬೆನ್ನಟ್ಟಿ ಹಿಡಿದು ನಿನ್ನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ನೀನು ಗಾಬರಿಯಿಂದ ಮೊದಲಿಗೆ ನಿನ್ನ ಹೆಸರು ಮಂಜು ಎಂದು, ನಂತರ ಮಂಜಯ್ಯ ಎಂದು ತಿಳಿಸಿದ್ದಾಗಿ, ನಂತರ ಪೂರ್ತಿ ಹೆಸರನ್ನು ಹೇಳುವಂತೆ ಕೇಳಿದಾಗ ನಿನ್ನ ಹೆಸರು ಮಂಜುನಾಥ ಬಿನ್ ಲಕ್ಷ್ಮಣಗೌಡ ಎಂದು, ಶಂಕರಪುರದಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರದ ವಾಸಿ ಎಂದು ತಿಳಿಸಿದ ಮೇರೆಗೆ ಶಾರದ ನಿನಗೆ ಏನಾಗಬೇಕು ಎಂದು ಕೇಳಿದಾಗ ಆಕೆ ತನ್ನ ಹೆಂಡತಿ ಎಂದು ತಿಳಿಸಿದಾಗ ನೀನೇ ಈ ಪ್ರಕರಣದ ಆರೋಪಿ ಎಂದು ಖಾತ್ರಿಯಾದ ಮೇರೆಗೆ ಅವರು ನಿನ್ನನ್ನು ಕರೆದುಕೊಂಡು ಬೆಳಿಗ್ಗೆ 7.30 ಗಂಟೆಗೆ ಠಾಣೆಗೆ ಹಿಂದಿರುಗಿ ಚಾಸಾ.29 ರವರ ಮುಂದೆ ಹಾಜರು ಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-67 ಪ್ರಾಸಾ.12 ಇವರು ತಮ್ಮ ಸಾಕ್ಷದಲ್ಲಿ ಮುಂದುವರಿದು ಆ ದಿನ ಚಾಸಾ.28- ನಂದಿನಿ ಎನ್ ರವರು ಪುತ್ತೂರಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಹೋಗಿದ್ದ ಕಾರಣ ಚಾಸಾ.8 ರವರು ಚಾಸಾ.29 ರವರಿಗೆ ನಿಪಿ.22 ರಂತೆ ವರದಿಯನ್ನು ಕೊಟ್ಟಿದ್ದಾಗಿ, ಆ ದಿನ ವಶಕ್ಕೆ ಪಡೆದ ಆರೋಪಿ ನೀನೇ ಎಂದು

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-68 ಪ್ರಾಸಾ.12 ಇವರು ತಮ್ಮ ಸಾಕ್ಷದಲ್ಲಿ ಮುಂದುವರಿದು ದಿಃ 23-01-2025 ರಂದು ಚಾಸಾ.30-ಅಭಯ್ ಪ್ರಕಾಶ್ ಸೋಮನಾಲ್ ರವರು ಕೃತ್ಯ ನಡೆದ ಸ್ಥಳದಲ್ಲಿ ನಿಪಿ.2 ಪಂಚನಾಮೆಯನ್ನು ಜರುಗಿಸಿದ್ದು ಚಾಸಾ-30 ರವರ ಸೂಚನೆಯ ಮೇರೆಗೆ ಅವರು ಪಂಚನಾಮೆಯನ್ನು ಬರೆದಿದ್ದಾಗಿ, ಆಗ ಪಿ.ಸಿ.80 ಮಧುಕುಮಾರ್ ರವರು ಫೋಟೋಗಳನ್ನು ತೆಗೆದಿದ್ದಾಗಿ, ನಂತರ ಸದರಿ ಫೋಟೋಗಳನ್ನು ಮತ್ತು ವೀಡಿಯೋಗಳನ್ನು ಕಂಪ್ಯೂಟರಿಗೆ ನಂತರ ಡಿವಿಡಿಗೆ ವರ್ಗಾಯಿಸಿ, ಆ ಬಗ್ಗೆ ದಿನಾಂಕ 23-01-2025 ರಂದು ಅವರು ಚಾಸಾ.30 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ನಿಪಿ.23 ರಂತೆ ದೃಢೀಕರಣ ಪತ್ರವನ್ನು ಮತ್ತು ಫೋಟೋಗಳನ್ನು ವರ್ಗಾಯಿಸಿದ ಡಿ.ವಿ.ಡಿ.ಯನ್ನು ನಿಪಿ.24 ರಂತೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-69 ಪ್ರಾಸಾ.13 ಮೋಹನ್ ಕುಮಾರ್, ಹಾಸನ ತಾಲ್ಲೂಕಿನ ತಹಸೀಲ್ದಾರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 21-01-2025 ರಂದು ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯ ಚಾಸಾ.21 ಪಿ.ಎಸ್.ಐ. ನಂದಿನಿರವರು ಅವರಿಗೆ ನಿಪಿ.25 ರಂತೆ ಮನವಿ ಸಲ್ಲಿಸಿ ಅವರ ಠಾಣೆಯ ಮೊಕದ್ದಮೆ ಸಂಖ್ಯೆಃ 7/2025 ಕ್ಕೆ ಸಂಬಂಧಿಸಿದಂತೆ ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿದ್ದ ಮೃತ ಶಾರದ ಕೋಂ ಮಂಜುನಾಥ ರವರ ಶವ ತನಿಖೆಯನ್ನು ನಡೆಸಿಕೊಡುವಂತೆ ಕೋರಿದ ಮೇರೆಗೆ ಅವರು ಪ್ರಾಸಾ.6-ಸುಧಾ, ಚಾಸಾ.10-ನಿಂಗಮ್ಮ ಮತ್ತು ಚಾಸಾ.11-ಸತೀಶರವರಿಗೆ ಶವ ತನಿಖೆಗೆ ಪಂಚರಾಗಿ ಸಹಕರಿಸಬೇಕೆಂದು ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-70 ಪ್ರಾಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅದೇ ದಿನ ಅಂದರೆ ದಿಃ 21-01-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಮೃತ ಶಾರದ ಕೋಂ ಮಂಜುನಾಥರವರ ಶವ ತನಿಖೆಯನ್ನು ನಡೆಸಿ ಆ ಬಗ್ಗೆ ನಿಪಿ. 10 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ನಿಪಿ.5 ರಿಂದ ಪಿ.8 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ, ಅವರು ತನಿಖೆ ನಡೆಸಿದ ಶಾರದರವರ ಶವ ನಿಪಿ.5 ಫೋಟೋದಲ್ಲಿ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-71 ಪ್ರಾಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ತನಿಖೆಯ ಸಮಯದಲ್ಲಿ ಮೃತಳ ಕೆಳ ತುಟಿಯ ಒಳಭಾಗದಲ್ಲಿ 2 x 1 ಸೆಂ ಮೀ ಉದ್ದದ ರಕ್ತಗಾಯ, ಆಕೆಯ ಹೊಟ್ಟೆಯ ಮೇಲೆ ರಕ್ತ ಹೆಪ್ಪುಗಟ್ಟಿದ್ದಂತೆ ಹಾಗೂ ಮೃತಳಿಗೆ ಸಿಜರಿಯನ್ ಆಪರೇಷನ್ ಆಗಿದ್ದು ರಕ್ತಸ್ರಾವವಾಗದಂತೆ ಪ್ಯಾಡ್ ಹಾಕಿರುವುದು ಕಂಡುಬಂದಿದ್ದಾಗಿ, ಅದನ್ನು ಹೊರತುಪಡಿಸಿ ಆಕೆಯ ದೇಹದ ಮೇಲೆ ಯಾವುದೇ ಬಟ್ಟೆಗಳು ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-72 ಪ್ರಾಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ತನಿಖಾ ಸಮಯದಲ್ಲಿ ಪ್ರಾಸಾ.4, ಚಾಸಾ.5, ಪ್ರಾಸಾ.5 ಮತ್ತು ಚಾಸಾ.7 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ಸಾಕ್ಷಿದಾರರ ಹೇಳಿಕೆ ಮತ್ತು ಶವ ತನಿಖೆಯ ಆಧಾರದ ಮೇರೆಗೆ ದಿಃ 14-01-2025 ರಂದು ಸಂಕ್ರಾಂತಿಯ ಹಬ್ಬದ ದಿನ ಆರೋಪಿಯಾದ ನೀನು ಕೆಲಸಕ್ಕೆ ಹೋದವನು ವಿಪರೀತವಾಗಿ ಕುಡಿದು ಮನೆಗೆ ವಾಪಸ್ ಬಂದು 9 ತಿಂಗಳ ಗರ್ಭಿಣಿಯಾಗಿದ್ದ ನಿನ್ನ ಹೆಂಡತಿ ಶಾರದಳಿಗೆ ಊಟ ಬಡಿಸುವಂತೆ ಕೇಳಿ ತನ್ನೊಂದಿಗೆ ಮಲಗು ಬಾ ಎಂದು ಕರೆದು ಆಕೆಯೊಂದಿಗೆ ಗಲಾಟೆ ತೆಗೆದು ಆಕೆಯ ತಲೆ ಕೂದಲನ್ನು ಹಿಡಿದು ಎಳೆದಾಡಿ ನಿನ್ನ ಕೈಯನ್ನು ಮುಷ್ಟಿ ಕಟ್ಟಿ ಆಕೆಯ ತಲೆಗೆ, ಮುಖಕ್ಕೆ ಹೊಡೆದು ಗರ್ಭಿಣಿಯಾಗಿದ್ದ ಆಕೆಯ ಹೊಟ್ಟೆಗೆ ನಿನ್ನ ಕಾಲಿನಿಂದ ಜಾಡಿಸಿ ಒದ್ದ ಪರಿಣಾಮ ಆಕೆಗೆ ಸುಸ್ತಾಗಿ ಪ್ರಜ್ಞಾಹೀನ ಸ್ಥಿತಿ ತಲುಪಿದ್ದಾಗಿ ದಿಃ 15.01.2025 ರಂದು ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ನಂತರ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಆಕೆಯನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ಅಲ್ಲಿ ವೈದ್ಯರು ಆಕೆಗೆ ಸಿಜೆರಿಯನ್ ಮಾಡಿ ಆಕೆಯ ಗರ್ಭದಲ್ಲಿದ್ದ ಮಗುವನ್ನು ಹೊರತೆಗೆದಿದ್ದಾಗಿ, ಆಕೆಗೆ ಪ್ರಜ್ಞೆ ಬಾರದೇ ಮತ್ತು ಚಿಕಿತ್ಸೆ ಫಲಕಾರಿಯಾಗದೇ ದಿಃ 21-01-2025 ರಂದು ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ಅಭಿಪ್ರಾಯಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-73 ಪ್ರಾಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ಪಂಚನಾಮೆಯನ್ನು ಜರುಗಿಸಿದ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಹಾಸನದ ಹಿಮ್ಸ್ ಆಸ್ಪತ್ರೆಯ ಮುಖ್ಯಸ್ಥರಿಗೆ ನಿಪಿ.26 ಮತ್ತು ನಿಪಿ.27 ರಂತೆ ನಮೂನೆ 146 ಮತ್ತು ವರದಿಯೊಂದಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-74 ಪ್ರಾಸಾ.14 ಧರ್ಮೇಗೌಡ, ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯ ಸಹಾಯಕ ಆರಕ್ಷಕ ಉಪ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿಃ 16-01-2025 ರಂದು ಚಾಸಾ.28 ರವರು ಚಾಸಾ.25 ರವರೊಂದಿಗೆ ಹಾಸನದ ಹಿಮ್ಸ್ ಆಸ್ಪತ್ರೆಗೆ ಹೋಗಿ ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಗಾಯಾಳು ಶಾರದರವರ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ಮೌಖಿಕವಾಗಿ ಆದೇಶಿಸಿದ್ದರ ಮೇರೆಗೆ ಅದೇ ದಿನ ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಅವರು ಮತ್ತು ಚಾಸಾ.25 ರವರು ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಭೇಟಿ ಮಾಡಿ, ಗಾಯಾಳು ಹೇಳಿಕೆ ನೀಡುವ ಸ್ಥಿತಿಯಲ್ಲಿರುವ ಬಗ್ಗೆ ವಿಚಾರಿಸಿದಾಗ ವೈದ್ಯಾಧಿಕಾರಿಗಳು ಗಾಯಾಳು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ತಿಳಿಸಿದ ಮೇರೆಗೆ ಸದರಿ ಆಸ್ಪತ್ರೆಯಲ್ಲಿ ಗಾಯಾಳುವಿನ ತಾಯಿಯಾದ ಪ್ರಾಸಾ.1 ಸಿದ್ದಮ್ಮ ರವರ ಹೇಳಿಕೆಯನ್ನು ಮಧ್ಯಾಹ್ನ 1 ಗಂಟೆಯಿಂದ 2.30 ಗಂಟೆಯವರೆಗೆ ಪ್ರಾಸಾ.9-ಡಾ.ಶ್ರೀಧರ್ ರವರ ಸಮಕ್ಷಮ ಪಡೆದುಕೊಂಡಿದ್ದಾಗಿ, ಪ್ರಾಸಾ.1 ರವರು ಹೇಳಿದಂತೆ ಚಾಸಾ.25 ರವರು ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡು ಸಂಜೆ 6.30 ಗಂಟೆಗೆ ಠಾಣೆಗೆ ವಾಪಸ್ಸಾಗಿ ಸದರಿ ಹೇಳಿಕೆ ನಿಪಿ.1 ನ್ನು ಚಾಸಾ.28 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-75 ಪ್ರಾಸಾ.15 ಮಂಜುಳಾ ಬಾಯಿ ಆಗಿನ ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕರಾಗಿ ವಿಶೇಷ ಕರ್ತವ್ಯದಲ್ಲಿದ್ದು ತಮ್ಮ ಸಾಕ್ಷ್ಯದಲ್ಲಿ ದಿಃ 17-01-2025 ರಂದು ಚಾಸಾ.28 ರವರು ಪುತ್ತೂರಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಹೋಗಿದ್ದರಿಂದ ಅವರು ಪ್ರಕರಣದ ಕಡತವನ್ನು ಚಾಸಾ-28 ರವರಿಂದ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-76 ಪ್ರಾಸಾ.15 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನಿನ್ನ ಪತ್ತೆಗಾಗಿ ಚಾಸಾ.28 ರವರು ನೇಮಿಸಿದ್ದ ಪ್ರಾಸಾ.12 ಮತ್ತು ಮುಖ್ಯ ಪೇದೆ ನಾಗರಾಜ್ ರವರು ನಿನ್ನನ್ನು ಅದೇ ದಿನ ಅಂದರೆ ದಿಃ 17-01-2025 ರಂದು ಬೆಳಿಗ್ಗೆ 7.15 ಗಂಟೆಗೆ ಚಿಕ್ಕಮಗಳೂರಿನ ಅಜಾದ್ ಪಾರ್ಕ್ ಬಳಿ ವಶಕ್ಕೆ ಪಡೆದು ಬೆಳಿಗ್ಗೆ 7.30 ಗಂಟೆಗೆ ಠಾಣೆಯಲ್ಲಿ ಅವರ ಮುಂದೆ ಹಾಜರುಪಡಿಸಿದ್ದಾಗಿ, ಮುಖ್ಯ ಪೇದೆ 54 ನಾಗರಾಜ್ ರವರು ಅವರಿಗೆ ನಿಪಿ.22 ರಂತೆ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-77 ಪ್ರಾಸಾ.15 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಆರೋಪಿಯಾದ ನಿನ್ನನ್ನು ದಸ್ತಗಿರಿ ಕ್ರಮ ಅನುಸರಿಸಿ ಬಂಧಿಸಿ, ನಿನ್ನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-78 ಪ್ರಾಸಾ.16 ಅಭಯ ಪ್ರಕಾಶ್ ಸೋಮನಾಲ್, ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯ ಪ್ರಭಾರೆ ಆರಕ್ಷಕ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ಕಡತವನ್ನು ದಿನಾಂಕಃ 21-01-2025 ರಂದು ಚಾಸಾ.28 ರವರಿಂದ ಪಡೆದು ಅದೇ ದಿನ ಬೆಳಿಗ್ಗೆ 8.30 ಗಂಟೆಗೆ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶಾರದವರು ಮೃತಪಟ್ಟ ಬಗ್ಗೆ ಸದರಿ ಆಸ್ಪತ್ರೆಯಿಂದ ಮಾಹಿತಿ ಬಂದ ಮೇರೆಗೆ ಚಾಸಾ.28 ರವರು ಪ್ರಕರಣಕ್ಕೆ ಬಿ.ಎನ್.ಎಸ್. ಕಲಂ 103 ನ್ನು ಅಳವಡಿಸಿಕೊಂಡು ತನಿಖೆ ಮುಂದುವರೆಸಲು ನ್ಯಾಯಾಲಯದ ಅನುಮತಿ ಕೋರಿ ಮನವಿ ಸಲ್ಲಿಸಿ ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಪ್ರಕರಣದ ಕಡತವನ್ನು ಅದೇ ದಿನ ಅವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-79 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶಾರದಳ ಸಾವು ಆಕೆ ಮದುವೆಯಾದ 7 ವರ್ಷಗಳ ಒಳಗೆ ಸಂಭವಿಸಿದ್ದರಿಂದ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿದ್ದ ಶವಗಾರದಲ್ಲಿದ್ದ ಆಕೆಯ ಶವ ಪರೀಕ್ಷೆಯನ್ನು ಹಾಸನ ತಹಸೀಲ್ದಾರ್ ರವರಿಂದ ಜರುಗಿಸಿ ದಾಖಲಾತಿಗಳನ್ನು ಪಡೆದುಕೊಂಡು ಠಾಣೆಗೆ ಬಂದು ವರದಿ ಮಾಡುವಂತೆ ಸೂಚಿಸಿ ಚಾಸಾ.28 ರವರಿಗೆ ಅದೇ ದಿನ ನಿಪಿ.28 ರಂತೆ ಜ್ಞಾಪನ ನೀಡಿದ ಮೇರೆಗೆ ಚಾಸಾ.28 ರವರು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಹಾಸನದ ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿ, ಶವಗಾರದಲ್ಲಿದ್ದ ಶಾರದ ಕೋಂ ಮಂಜುನಾಥರವರ ಶವ ಪರೀಕ್ಷೆಯನ್ನು ನಡೆಸಿ, ಆ ಬಗ್ಗೆ ಜರುಗಿಸಲಾದ ಶವ ಪಂಚನಾಮೆ, ಸಾಕ್ಷಿದಾರರ ಹೇಳಿಕೆಗಳು, ಫೋಟೋಗಳನ್ನು ಮತ್ತು ಇತರೆ ದಾಖಲೆಗಳನ್ನು ಅದೇ ದಿನ ಅಂದರೆ ದಿಃ 21.01.2025 ರಂದು ಅವರಿಗೆ ಸಲ್ಲಿಸಿ, ನಿಪಿ.29 ರಂತೆ ವರದಿ ನೀಡಿದ್ದಾಗಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-80 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 23-01-2025

ರಂದು ಸಂಜೆ 5 ಗಂಟೆಗೆ ಚಿಕ್ಕಮಗಳೂರು ನಗರ ಶಂಕರಪುರದ 2 ನೇ ಅಡ್ಡ ರಸ್ತೆ, ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರ ಇದ್ದ ಪ್ರಾಸಾ.1 ರವರು ಆರೋಪಿಯಾದ ನೀನು ಮತ್ತು ಮೃತ ಶಾರದಳೊಂದಿಗೆ ವಾಸವಿದ್ದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ, ಪ್ರಾಸಾ.11-ಪಾರ್ಥಿಬನ್ ಮತ್ತು ಚಾಸಾ.18-ಸುರೇಶರವರಿಗೆ ನಿಪಿ.18 ರಂತೆ ನೋಟೀಸನ್ನು ನೀಡಿದ್ದಾಗಿ, ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಸಂಜೆ 5 ಗಂಟೆಯಿಂದ 5.45 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ಕಚ್ಚಾ ನಕ್ಷೆಯನ್ನು ತಯಾರಿಸಿದ್ದಾಗಿ, ಅವರ ಸೂಚನೆಯ ಮೇರೆಗೆ ಪ್ರಾಸಾ.12 ರವರು ನಿಪಿ.3 ಮತ್ತು 4 ರಂತೆ ಫೋಟೋಗಳನ್ನು ತೆಗೆದಿದ್ದಾಗಿ, ನಿಪಿ.23 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ಪ್ರಮಾಣಪತ್ರ ಹಾಗೂ ಡಿವಿಡಿ ಯನ್ನು ನಿಪಿ.24 ರಂತೆ ನೀಡಿದ್ದಾಗಿ, ಅದೇ ದಿನ ಪ್ರಾಸಾ.3 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-81 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 25-01-2025 ರಂದು ಘಟನಾ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯ ಸಹಾಯ ಕಾರ್ಯಪಾಲಕ ಅಭಿಯಂತರಿಗೆ ನಿಪಿ.30 ರಂತೆ ಮನವಿ ಸಲ್ಲಿಸಿದ್ದಾಗಿ, ದಿಃ 31-01-2025 ರಂದು ಚಾಸಾ.20 ರವರು ವರದಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳವು ಪ್ರಾಸಾ.3 ಸಂತೋಷ ಕುಮಾರ್ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಅಸೆಸೆಮಂಟ್ ಸಂಖ್ಯೆಃ 6096/4404 ಪಿ ಐ ಡಿ ಸಂಖ್ಯೆಃ 10-2-505-51 ರಂತೆ ದಾಖಲಾಗಿರುವ ಬಗ್ಗೆ ನಿಪಿ.19 ರಂತೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-82 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಚಿಕ್ಕಮಗಳೂರು ನಗರ ಸಭಾ ಆಯುಕ್ತರಿಗೆ ಘಟನಾ ಸ್ಥಳದ ದಾಖಲೆಯನ್ನು ನೀಡುವಂತೆ ನಿಪಿ.31 ರಂತೆ ಮನವಿ ಸಲ್ಲಿಸಿದ್ದಾಗಿ, ದಿಃ 11.02.2025 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ನಿಪಿ.21 ನ್ನು ನಿಪಿ.22 ರ ಪತ್ರದೊಂದಿಗೆ ಚಾಸಾ.21 ರವರಿಂದ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-83 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಪ್ರಾಸಾ.1

ರವರ ಹೇಳಿಕೆಯನ್ನು ಬಿ.ಎನ್.ಎಸ್.ಎಸ್ ಕಲಂ 183 ರಡಿಯಲ್ಲಿ ದಾಖಲಿಸಿ ನೀಡುವಂತೆ ಚಿಕ್ಕಮಗಳೂರಿನ 2 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದ್ದಾಗಿ, ಅದೇ ದಿನ ಪ್ರಾಸಾ.2 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ, ದಿಃ 28.01.2025 ರಂದು ಬಿ.ಎನ್.ಎಸ್.ಎಸ್ ಕಲಂ 183 ರಡಿಯಲ್ಲಿ ದಾಖಲಿಸಿದ್ದ ಪ್ರಾಸಾ-1 ರವರ ಹೇಳಿಕೆಯನ್ನು ನಿಪಿ.33 ರಂತೆ ಪಡೆದಿದ್ದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-84 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 27-01-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಗೆ ಮನವಿಯನ್ನು ಸಲ್ಲಿಸಿ ಮೃತರ ಮರಣೋತ್ತರ ಪರೀಕ್ಷಾ ವರದಿಯನ್ನು ನೀಡುವಂತೆ ನಿಪಿ.32 ರಂತೆ ಮನವಿ ಸಲ್ಲಿಸಿದ್ದಾಗಿ, ಅದೇ ದಿನ ಸದರಿ ಆಸ್ಪತ್ರೆಯಿಂದ ಮೃತರ ಮರಣೋತ್ತರ ಪರೀಕ್ಷಾ ವರದಿ ನಿಪಿ.11 ನ್ನು ವೈದ್ಯರ ಅಂತಿಮ ಅಭಿಪ್ರಾಯ ವರದಿಯೊಂದಿಗೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-85 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 05-03-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಗೆ ನಿಪಿ.34 ರಂತೆ ಮನವಿಯನ್ನು ಸಲ್ಲಿಸಿ ಸದರಿ ಆಸ್ಪತ್ರೆಯಲ್ಲಿ ಮೃತ ಶಾರದರವರಿಗೆ ಚಿಕಿತ್ಸೆ ಕೊಟ್ಟಿದ್ದ ಬಗ್ಗೆ ಮತ್ತು ಆಕೆ ಅಲ್ಲಿ ಮಗುವಿಗೆ ಜನ್ಮ ನೀಡಿದ್ದ ಬಗ್ಗೆ ದಾಖಲೆಯನ್ನು ನೀಡುವಂತೆ ಕೋರಿದ್ದು ಸದರಿ ಆಸ್ಪತ್ರೆಯಿಂದ ನಿಪಿ.14 ರಿಂದ 17 ರಂತೆ ದಾಖಲೆಗಳನ್ನು ಪಡೆದುಕೊಂಡಿದ್ದಾಗಿ ಹಾಗೂ ದಿಃ 06-03-2025 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ನಿಪಿ.35 ರಂತೆ ಮನವಿಯನ್ನು ಸಲ್ಲಿಸಿ ಸದರಿ ಆಸ್ಪತ್ರೆಯಲ್ಲಿ ಮೃತ ಶಾರದರವರಿಗೆ ಚಿಕಿತ್ಸೆ ಕೊಟ್ಟಿದ್ದ ಬಗ್ಗೆ ದಾಖಲೆಯನ್ನು ನೀಡುವಂತೆ ಕೋರಿದ ಮೇರೆಗೆ ದಿಃ 05-04-2025 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆ ಆಸ್ಪತ್ರೆಯಿಂದ ಶಾರದರವರಿಗೆ ಚಿಕಿತ್ಸೆ ನೀಡಿದ್ದ ಬಗ್ಗೆ ದಾಖಲೆಗಳನ್ನು ನಿಪಿ.12 ಮತ್ತು ನಿಪಿ.13 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-86 ಪ್ರಾಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅಂದರೆ ದಿಃ 05-04-2025 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯಾದ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-87 ಪ್ರಾಸಾ.17 ನಂದಿನಿ ಶೆಟ್ಟಿ, ಆಗಿನ ಚಿಕ್ಕಮಗಳೂರು ಮಹಿಳಾ ಪೋಲೀಸ್ ಠಾಣೆಯ ಪಿ.ಎಸ್ ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 16-01-2025 ರಂದು ಜಿಲ್ಲಾ ನಿಸ್ತಂತು ಘಟಕದಿಂದ ಶಾರದ ಕೋಂ ಮಂಜುನಾಥ ಎಂಬುವವರು ಹಲ್ಲೆಯ ಹಿನ್ನಲೆಯಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರೆಂದು ಬಂದ ಮಾಹಿತಿಯನ್ನು ಅವರ ಮೇಲಾಧಿಕಾರಿಗಳಿಗೆ ತಿಳಿಸಿದ್ದಾಗಿ, ಪ್ರಾಸಾ.14-ಧರ್ಮೇಗೌಡ ಮತ್ತು ಚಾಸಾ.25-ಜ್ಯೋತಿ ರವರನ್ನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ನೇಮಿಸಿ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-88 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದರಂತೆ ಅದೇ ದಿನ ಪ್ರಾಸಾ.14 ಮತ್ತು ಚಾಸಾ.25 ರವರು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುವನ್ನು ಭೇಟಿ ನೀಡಿ ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರದ ಕಾರಣ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ದೃಢೀಕರಿಸಿದ ಕಾರಣ ವೈದ್ಯಾಧಿಕಾರಿಗಳ ಸಮಕ್ಷಮ ಗಾಯಾಳುವಿನ ಜೊತೆಯಲ್ಲಿದ್ದ ಆಕೆಯ ತಾಯಿಯಾದ ಪ್ರಾಸಾ.1 ಸಿದ್ದಮ್ಮರವರ ಹೇಳಿಕೆ ನಿಪಿ.1 ನ್ನು ಪ್ರಾಸಾ.14 ರವರು ಮಧ್ಯಾಹ್ನ 1 ಗಂಟೆಯಿಂದ 2.30 ಗಂಟೆಯವರೆಗೆ ಪಡೆದುಕೊಂಡಿದ್ದಾಗಿ, ಅದೇ ದಿನ ಸಂಜೆ 6.30 ಗಂಟೆಗೆ ಅವರ ಮುಂದೆ ಹಾಜರುಪಡಿಸಿದ್ದಾಗಿ, ಅವರು ಸದರಿ ಹೇಳಿಕೆಯ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಅದೇ ದಿನ ಸಂಜೆ 6.45 ಗಂಟೆಗೆ ಸದರಿ ಹೇಳಿಕೆ ದೂರಿನ ಮೇರೆಗೆ ಠಾಣಾ ಮೊ.ಸಂಃ 7/2025 ರಲ್ಲಿ ಆರೋಪಿಯಾದ ನಿನ್ನ ವಿರುದ್ಧ ಪ್ರಕರಣವನ್ನು ದಾಖಲು ಮಾಡಿ, ನಿಪಿ.36 ರಂತೆ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗೆ ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-89 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪ್ರಾಸಾ.14 ರವರು ಪ್ರಾಸಾ.1 ರವರ ಹೇಳಿಕೆಯನ್ನು ನಿಪಿ.1 ರಂತೆ ದಾಖಲಿಸುವ ಕಾಲಕ್ಕೆ ಚಾಸಾ.25 ರವರು ನಿಪಿ.37 ರಂತೆ ವಿಡಿಯೋ ಚಿತ್ರಿಕರಿಸಿದ್ದಾಗಿ, ಆ ಬಗ್ಗೆ ನಿಪಿ-37 ರಂತೆ ಡಿವಿಡಿಯನ್ನು, ನಿಪಿ.38 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-90 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನಿನ್ನ ಪತ್ತೆಗಾಗಿ ಪ್ರಾಸಾ.12 ಮತ್ತು ಹೆಚ್.ಸಿ. ನಾಗರಾಜ್ ರವರನ್ನು ನೇಮಿಸಿ ನಿಪಿ.39 ರಂತೆ ಜ್ಞಾಪನ ನೀಡಿ ಕಳುಹಿಸಿದ್ದಾಗಿ, ದಿಃ 21.01.2025 ರಂದು ಹಾಸನ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಶಾರದ ಕೋಂ ಮಂಜುನಾಥರವರು ಮೃತಪಟ್ಟಿದ್ದಾಗಿ ಬೆಳಿಗ್ಗೆ 9.30 ಗಂಟೆಗೆ ಜಿಲ್ಲಾ ನಿಸ್ತಂತು ಘಟಕಕ್ಕೆ ಮತ್ತು ಠಾಣಾ ಸ್ಥಿರ ದೂರವಾಣಿಗೆ ಬಂದ ಮಾಹಿತಿಯನ್ನು ಅವರು ಪ್ರಾಸಾ.16 ರವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-91 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಬೆಳಿಗ್ಗೆ 10.15 ಗಂಟೆಗೆ ಪ್ರಾಸಾ.1 ರವರು ಠಾಣೆಗೆ ಹಾಜರಾಗಿ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತನ್ನ ಮಗಳು ಶಾರದರವರು ಚಿಕಿತ್ಸೆ ಫಲಕಾರಿಯಾಗದೇ ಆ ದಿನ ಬೆಳಿಗ್ಗೆ 8.30 ಗಂಟೆಗೆ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾಗಿ, ಆರೋಪಿ ಕಾಲಿನಿಂದ ಶಾರದಳ ಹೊಟ್ಟೆಗೆ ಒದ್ದಿದ್ದರಿಂದ ಮತ್ತು ತಲೆಗೂದಲು ಎಳೆದು ಗೋಡೆಗೆ ತಲೆಯನ್ನು ಹೊಡೆಸಿದ್ದರಿಂದ ಆಕೆಯ ಸಾವು ಸಂಭವಿಸಿದ್ದಾಗಿ ಮತ್ತು ಮುಷ್ಟಿ ಕಟ್ಟಿ ತಲೆಗೆ ಮತ್ತು ಮುಖಕ್ಕೆ ಹೊಡೆದು ಕೊಲೆ ಮಾಡಿದ್ದಾಗಿ ಹೇಳಿಕೆ ನೀಡಿದ್ದಾಗಿ ನಂತರ ಅವರು ಈ ಪ್ರಕರಣದಲ್ಲಿ ಬಿ.ಎನ್.ಎಸ್. ಕಲಂ 103 ನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ತನಿಖೆ ಮುಂದುವರೆಸಲು ನ್ಯಾಯಾಲಯದ ಅನುಮತಿ ಕೋರಿ ನಿಪಿ.30 ರಂತೆ ಮನವಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-92 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪ್ರಾಸಾ.16 ರವರು ಅವರಿಗೆ ಅದೇ ದಿನ ನಿಪಿ.38 ರಂತೆ ಜ್ಞಾಪನವನ್ನು ನೀಡಿ ಮೃತಳ ಶವ ತನಿಖೆಯನ್ನು ಹಾಸನದ ತಾಲ್ಲೂಕು ದಂಡಾಧಿಕಾರಿಯವರಿಂದ ನಡೆಸಿ ದಾಖಲಾತಿಗಳನ್ನು ಪಡೆದುಕೊಂಡು ತಮಗೆ ವರದಿ ಮಾಡುವಂತೆ ಸೂಚಿಸಿದ್ದರ ಮೇರೆಗೆ ಅವರು ಹಾಸನದ ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮೃತ ಶಾರದರವರ ಶವವನ್ನು ನೋಡಿದ್ದಾಗಿ, ನಂತರ ಹಾಸನದ ತಾಲ್ಲೂಕು ದಂಡಾಧಿಕಾರಿಗಳಿಗೆ ನಿಪಿ.25 ರಂತೆ ಮನವಿಯನ್ನು ಸಲ್ಲಿಸಿ ಮೃತಳ ಸಾವು ಮದುವೆಯಾಗಿ 7 ವರ್ಷಗಳ ಒಳಗೆ ಸಂಭವಿಸಿದ್ದರಿಂದ ಆಕೆಯ ಶವ ಪಂಚನಾಮೆಯನ್ನು ನಡೆಸಿಕೊಡುವಂತೆ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-93 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಹಾಸನದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಚಾಸಾ.26 ರವರಿಗೆ ನಿಪಿ.41 ರಂತೆ ಮನವಿಯನ್ನು ಸಲ್ಲಿಸಿ ಶವ ಪಂಚನಾಮೆಯನ್ನು ನಡೆಸಿಕೊಡಲು ತಮ್ಮ ಕಛೇರಿಯಿಂದ 3 ಜನ ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸಿಕೊಡುವಂತೆ ಕೋರಿದ್ದರ ಮೇರೆಗೆ ಚಾಸಾ.26 ರವರು ನಿಪಿ.42 ರಂತೆ ಕಛೇರಿಯ ಆದೇಶವನ್ನು ಹೊರಡಿಸಿ ಅವರ ಇಲಾಖೆಯ ಪ್ರಾಸಾ.6 ಮತ್ತು ಚಾಸಾ.10 ರವರನ್ನು ಪಂಚರನ್ನಾಗಿ ನೇಮಿಸಿ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-94 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅವರು ಹಾಸನದ ಹಿಮ್ಸ್ ಆಸ್ಪತ್ರೆಗೆ ಅವರೊಂದಿಗೆ ಹೆಚ್.ಸಿ.265 ಅಬ್ದುಲ್ ಕರೀಂ, ಚಾಸಾ.19-ಪಿಸಿ 19 ಸುನಿತಾ ಮತ್ತು ಪ್ರಾಸಾ.12-ರವಿಗೌಡ ರವರನ್ನು ಕರೆದುಕೊಂಡು ಹೋಗಿದ್ದಾಗಿ, ನಂತರ ಹಾಸನದ ತಹಸೀಲ್ದಾರ್ ರಾದ ಪ್ರಾಸಾ.13 ಮೋಹನ್ ಕುಮಾರ್ ರವರು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಶಾರದರವರ ಶವ ತನಿಖೆಯನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ನಡೆಸಿ ಆ ಬಗ್ಗೆ ಜರುಗಿಸಿದ ಪಂಚನಾಮೆ, ಪಂಚರಿಗೆ ಕೊಟ್ಟ ನೋಟೀಸ್, ಸಾಕ್ಷಿದಾರರ ಹೇಳಿಕೆಗಳು ಮತ್ತು ಆ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ಅವರಿಗೆ ಕೊಟ್ಟಿಂದ್ದಾಗಿ, ನಂತರ ಅವರು ಚಾಸಾ.19 ರವರನ್ನು ಶವದ ಬೆಂಗಾವಾಲಿನಲ್ಲಿ ಇರಿಸಿ ಮರಣೋತ್ತರ ಪರೀಕ್ಷೆಯಾದ ನಂತರ ಶವವನ್ನು ಪ್ರಾಸಾ.1 ರವರ ವಶಕ್ಕೆ ನೀಡುವಂತೆ ಸೂಚಿಸಿದ್ದರ ಮೇರೆಗೆ ಅವರು ಶವವನ್ನು ಪ್ರಾಸಾ.1 ರವರ ವಶಕ್ಕೆ ನೀಡಿ ಅವರಿಂದ ರಸೀದಿಯನ್ನು ಪಡೆದು ಅವರಿಗೆ ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-95 ಪ್ರಾಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಅದೇ ದಿನ ಠಾಣೆಗೆ ಹಿಂದಿರುಗಿ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ಪ್ರಾಸಾ.16 ರವರಿಗೆ ಹಾಜರುಪಡಿಸಿ ಆ ಬಗ್ಗೆ ನಿಪಿ.29 ರಂತೆ ವರದಿ ನೀಡಿದ್ದಾಗಿ, ನಂತರ ಪ್ರಕರಣದ ಮುಂದಿನ ತನಿಖೆಯನ್ನು ಪ್ರಾಸಾ.16 ರವರು ವಹಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-96 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ನನಗೆ ಮತ್ತು ಶಾರದಳಿಗೆ ಮೊದಲಿಗೆ ಒಂದು ಹೆಣ್ಣು ಮಗು ಜನಿಸಿತ್ತು. ಆದರೆ ಅದನ್ನು ಸರಿಯಾಗಿ ಸಾಕಲು ಆಗುತ್ತಿಲ್ಲ ಎಂದು ಯಾರೋ ಅಂಗನವಾಡಿ ಯವರಿಗೆ ದೂರನ್ನು ಕೊಟ್ಟಿದ್ದರಿಂದ ಆ ಮಗುವನುನ ಯಾರೋ ತೆಗೆದುಕೊಂಡು ಹೋಗಿದ್ದರು. ಅಂದಿನಿಂದ ಶಾರದ ಕಿನ್ನತೆಗೆ ಒಳಗಾಗಿದ್ದಳು ಮತ್ತು ನನ್ನ ಮೇಲೆ ಹಲ್ಲೆ ಮಾಡಿದ್ದಳು. ಬೆಂಗಳೂರಿನ ಆಸ್ಪತ್ರೆಯಲ್ಲಿ ಮೊದಲ ಹೆರಿಗೆ ಆಗಿತ್ತು. ಆ ಸಮಯದಲ್ಲಿ ವೈದ್ಯರು ನನ್ನ ಹೆಂಡತಿಯ ಮಾನಸಿಕ ಆರೋಗ್ಯ ಸರಿ ಇರುವುದಿಲ್ಲ ಆಕೆ ಹೇಳಿದಂತೆ ಆಕೆಯನ್ನು ನಡೆಸಿಕೊಳ್ಳಿ ಎಂದು ನನಗೆ ಮತ್ತು ನನ್ನ ಅತ್ತೆಗೆ ಹೇಳಿದ್ದರು.

ಪ್ರಶ್ನೆ-97 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 18.02.2026

ಸಹಿ/-
(ಭಾನುಮತಿ ಬಿ.ಸಿ.),
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.